# ಅಧ್ಯಾಯ 10

# ಚಿಕ್ಕ ಸುರುಳಿ

ಮುಂಚಿನ ಎರಡು ಅಧ್ಯಾಯಗಳು ಮೊದಲ ಆರು ತುತೂರಿಗಳ ಸುತ್ತ ಇದ್ದವು. 10ನೇ ಅಧ್ಯಾಯವು ಆರಂಭಗೊಳ್ಳುತ್ತಿರುವ ಹಾಗೆ, ವಾಚಕನು ಕಡೇ ತುತೂರಿಯ ಧ್ವನಿಯ ಘೋಷವನ್ನು ಕೇಳಿಸಿಕೊಳ್ಳುವೆನೆಂದು ಕಾಯುತ್ತಿರುತ್ತಾನೆ. ಬದಲಾಗಿ, ಈ ಕಥನದ ಮಧ್ಯದಲ್ಲಿ ಹೆಚ್ಚು ಕಡಿಮೆ ಎರಡು ಅಧ್ಯಾಯಗಳನ್ನೊಳಗೊಂಡ ಬೇರೆ ದರ್ಶನಗಳು ಭಂಗವಾಗಿ ಬಂದು ಬಿಡುತ್ತವೆ. ಕಡೇ ತುತೂರಿಯು 11:15ರ ವರೆಗೂ ಊದಲ್ಪಡುವದಿಲ್ಲ.

ಇದೇ ರೀತಿಯ ಒಂದು ಭಂಗಪಡಿಸುವಿಕೆಯು ಆರನೆಯ ಮುದ್ರೆಯ ಒಡೆಯುವಿಕೆ (6:12-17) ಮತ್ತು ಏಳನೆಯ ಮುದ್ರೆಯ ಒಡೆಯಲ್ಪಡುವಿಕೆ (8:1-5) ನಡುವೆ ಸಂಭವಿಸಿತ್ತು. ಆ ಎರಡು ಮುದ್ರೆಗಳ ಮಧ್ಯದಲ್ಲಿ, 144,000 ಮಂದಿ ಮುದ್ರೆ ಒತ್ತಲ್ಪಡುತ್ತಾರೆ (7:1-8) ಮತ್ತು ಸಿಂಹಾಸನದ ಮುಂದೆ ಅಸಂಖ್ಯಾತರಾದ ಜನರ ಸಮೂಹವು ಕಾಣಿಸಿಕೊಳ್ಳುತ್ತದೆ (7:9-17).

ಹೇಗೂ, ಈ ತುತೂರಿಗಳ ನಡುವೆ ಭಂಗವುಂಟಾಗುವಿಕೆಯು ಆ ಮುದ್ರೆಗಳಿಗಾದ ಭಂಗಕ್ಕಿಂತಲೂ ವ್ಯತ್ಯಾಸವಾಗಿರುತ್ತದೆ. ಮುದ್ರೆಗಳ ನಡುವಿನ ಮಧ್ಯಂತರ ಸಭೆಯನ್ನು *ಆದರಣೆ ಮಾಡುವದಕ್ಕೆ* ರಚಿಸಲ್ಪಟ್ಟಿದ್ದರೆ, ತುತೂರಿಗಳ ನಡುವಿನ ಮಧ್ಯಂತರ ಸಭೆಗೆ *ಕರೆ ಕೊಡುವ* ಉದ್ದೇಶಕ್ಕಾಗಿ ಆಗಿರುತ್ತದೆ. ಕಥನದಲ್ಲಿನ ಮುಂಚೆಯ ವಿರಾಮವು "ಆ ತೊಂದರೆಗಳು ಬರುವಾಗ ಸಭೆಗೆ *ಏನಾಗುವದು?*" ಎಂಬ ಪ್ರಶ್ನೆಗೆ ಉತ್ತರವನ್ನು ಕೊಟ್ಟಿತು, ಆದರೆ ಈಗಿನ ವಿರಾಮವು "ಆ ಸಂಕಷ್ಟದ ಸಮಯಗಳಲ್ಲಿ ಸಭೆಯು ಏನು ಮಾಡ*ತಕ್ಕದ್ದು?*" ಎಂಬ ಪ್ರಶ್ನೆಗೆ ಉತ್ತರಿಸುತ್ತದೆ.

"ಭಂಗಪಡಿಸುವಿಕೆ," "ಮಧ್ಯಂತರ," ಮತ್ತು "ವಿರಾಮ" ಎಂಬ ಪದಗಳು 10:1-11:14 ವಚನಗಳ ಭಾಗವು ಅಪ್ರಾಮುಖ್ಯವಾದದ್ದು ಅಥವಾ ಯೋಹಾನನು ಪ್ರಕಟನೆ ಪುಸ್ತಕದ ಉದ್ದೇಶದಿಂದ ಪಕ್ಕಕ್ಕೆ ತಿರುಗಿಕೊಂಡನು ಎಂಬ ಅರ್ಥವನ್ನು ಕೊಡುವದಿಲ್ಲ. ಪ್ರಕಟನೆ ಪುಸ್ತಕದ ಆರಂಭಿಕ ಸಾಲುಗಳಲ್ಲಿ, ಪುಸ್ತಕದ ಸಂದೇಶವನ್ನು ಕೇಳುವ ಮತ್ತು "ಕೈಕೊಂಡು ನಡೆಯುವವನಿಗೆ" ಆಶೀರ್ವಾದ ನುಡಿಯಲ್ಪಟ್ಟಿತು (1:3). 10:1-11:14ರಂತಹ ವಿಭಾಗಗಳಿಲ್ಲದೆ ಹೋದರೆ ತಾವು ನಿಖರವಾಗಿ ಏನನ್ನು "ಕೈಕೊಂಡು ನಡೆಯಬೇಕು" ಎಂಬುದನ್ನು ತಿಳಿಯುವದರಿಂದ ಕ್ರೈಸ್ತರು ವಂಚಿತರಾಗುವರು. ಈ ಸುತ್ತು ದಾರಿ ಹಿಡಿಯುವಿಕೆಗಳು ಪುಸ್ತಕದಲ್ಲಿಯೇ ಅತ್ಯಂಥ ಬೆಲೆಯುಳ್ಳ ವಿಭಾಗಗಳಾಗಿವೆ. ಅವುಗಳು ಕ್ರೈಸ್ತರನ್ನು ಘಟನಾವಳಿ ನಡುವೆ ಕೊಂಡೊಯ್ದು ನಿಲ್ಲಿಸುತ್ತವೆ ಮತ್ತು ದೇವರ ಮಹಾ ಕಾರ್ಯಯೋಜನೆಯಲ್ಲಿ ಅವರ ಪಾತ್ರವೇನು ಎಂಬುದನ್ನು ತಿಳಿಸುತ್ತವೆ.

10:1-11:14ರಲ್ಲಿ ಮೂರು ವಿಶೇಷ ಕರೆಗಳನ್ನು ನೀಡಲಾಗುತ್ತದೆ. ಮೊದಲನೆಯದ್ದು 10ನೇ ಅಧ್ಯಾಯದಲ್ಲಿ ಸಿಕ್ಕುತ್ತದೆ ಅದು ದೇವರ ಸಂದೇಶದ ಮೇಲೆ ಮುಖ್ಯ ಗಮನ ಹೊಂದಿರುತ್ತದೆ ಮತ್ತು ಸಂದೇಶದ ಮಹತ್ವವನ್ನು ಗ್ರಹಿಸಿಕೊಳ್ಳುವಿಕೆ ಹಾಗೂ ಸ್ವಂತವಾಗಿಸಿಕೊಳ್ಳುವದರ

ಅಗತ್ಯತೆಯ ಮೇಲೆ ಮುಖ್ಯ ಗಮನ ಹೊಂದಿರುತ್ತದೆ.

## ಚಿಕ್ಕ ಸುರುಳಿಯನ್ನು ಹೊಂದಿದ್ದ ದೇವದೂತನು (10:1-7)

**1ತರುವಾಯ ಬಲಿಷ್ಠನಾದ ಮತ್ತೊಬ್ಬ ದೇವದೂತನು ಪರಲೋಕದಿಂದ
ಇಳಿದುಬರುವದನ್ನು ಕಂಡೆನು. ಅವನು ಮೇಘವನ್ನು ಧರಿಸಿಕೊಂಡಿದ್ದನು; ಅವನ ತಲೆಯ ಮೇಲೆ
ಮುಗಿಲುಬಿಲ್ಲು ಇತ್ತು; ಅವನ ಮುಖವು ಸೂರ್ಯನೋಪಾದಿಯಲ್ಲಿತ್ತು; ಅವನ ಪಾದಗಳು
ಬೆಂಕಿಯ ಕಂಬಗಳಂತಿದ್ದವು; 2ಅವನ ಕೈಯಲ್ಲಿ ಬಿಚ್ಚಿದ್ದ ಒಂದು ಚಿಕ್ಕ ಸುರುಳಿ ಇತ್ತು; ಅವನು
ಬಲಗಾಲನ್ನು ಸಮುದ್ರದ ಮೇಲೆಯೂ ಎಡಗಾಲನ್ನು ಭೂಮಿಯ ಮೇಲೆಯೂ ಇಟ್ಟು 3ಸಿಂಹವು
ಗರ್ಜಿಸುವ ಪ್ರಕಾರ ಮಹಾ ಶಬ್ದದಿಂದ ಕೂಗಿದನು. 4ಕೂಗಿದಾಗ ಏಳು ಗುಡುಗುಗಳು
ಒಂದೊಂದಾಗಿ ಧ್ವನಿಕೊಟ್ಟವು. ಆ ಏಳು ಗುಡುಗುಗಳು ನುಡಿದಾಗ ನಾನು
ಬರೆಯಬೇಕೆಂದಿದ್ದೆನು. ಆದರೆ - ಆ ಏಳು ಗುಡುಗುಗಳು ನುಡಿದದ್ದನ್ನು ನೀನು ಬರೆಯದೆ
ಗುಪ್ತವಾಗಿಡು ಎಂದು ಹೇಳುವ ಆಕಾಶವಾಣಿಯನ್ನು ಕೇಳಿದೆನು. 5ಅನಂತರ ಸಮುದ್ರದ
ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವವನಾಗಿ ನನಗೆ ಕಾಣಿಸಿದ ದೇವದೂತನು ತನ್ನ
ಬಲಗೈಯನ್ನು ಪರಲೋಕದ ಕಡೆಗೆ ಎತ್ತಿ 6ಪರಲೋಕವನ್ನೂ ಅದರಲ್ಲಿರುವ ಸಮಸ್ತವನ್ನೂ
ಭೂಮಿಯನ್ನೂ ಅದರಲ್ಲಿರುವ ಸಮಸ್ತವನ್ನೂ ಸಮುದ್ರವನ್ನೂ ಅದರಲ್ಲಿರುವ ಸಮಸ್ತವನ್ನೂ
ಸೃಷ್ಟಿಸಿ 7ಯುಗಯುಗಾಂತರಗಳಲ್ಲಿಯೂ ಜೀವಿಸುವಾತನ ಮೇಲೆ ಆಣೆಯಿಟ್ಟು – ಇನ್ನು
ಸಾವಕಾಶವಿರುವದಿಲ್ಲ; ಏಳನೆಯ ದೇವದೂತನು ಶಬ್ದ ಮಾಡುವ ದಿನಗಳಲ್ಲಿ ಅಂದರೆ ಅವನು
ತುತೂರಿಯನ್ನು ಊದುವದಕ್ಕಿರುವ ಸಮಯದಲ್ಲಿ ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದ
ಸಂಕಲ್ಪವನ್ನು ತನ್ನ ದಾಸರಾದ ಪ್ರವಾದಿಗಳಿಗೆ ಶುಭವರ್ತಮಾನವಾಗಿ ತಿಳಿಸಿದ್ದ ಪ್ರಕಾರ
ನೆರವೇರಿಸುವನು ಎಂದು ಹೇಳಿದನು.**

ಕ್ರೈಸ್ತರು ಪಾಪದಲ್ಲಿ ಮಿಂದೆದ್ದಿರುವ ಸಮಾಜವನ್ನು ಎದುರಿಸುವಾಗ, ಅವರು ಕೆಲವು ಸಾರಿ ಚಿಕ್ಕವರಂತೆಯೂ ಶಕ್ತಿಯಿಲ್ಲದವರಂತೆಯೂ ಭಾವಿಸಿಕೊಳ್ಳುತ್ತಾರೆ. ಆದಿ ಸಭೆಯ ಸದಸ್ಯರು ರೋಮನ್ ಸಾಮ್ರಾಜ್ಯದ ಶಕ್ತಿ ಹಾಗೂ ಅಧಿಕಾರವನ್ನು ಎದುರಿಸುವ ವೇಳೆ ಅದೇ ರೀತಿಯಲ್ಲಿ ಭಾವಿಸಿಕೊಂಡಿರಬಹುದಾಗಿದೆ. 10ನೇ ಅಧ್ಯಾಯದ ಆರಂಭಿಕ ದೃಶ್ಯವು ಅಧಿಕಾರ ಮತ್ತು ಶಕ್ತಿಯ ಕುರಿತು ಒಂದು ಭಿನ್ನವಾದ ದೃಷ್ಟಿಕೋನವನ್ನು ಒದಗಿಸುತ್ತದೆ ಯಾಕೆಂದರೆ ದೇವರು ಯೋಹಾನನಿಗೆ ಒಂದು ಸಂದೇಶವನ್ನು ತಲುಪಿಸುವಂತೆ ಒಬ್ಬ ದೈತ್ಯದೇಹಿಯನ್ನು ಕಳುಹಿಸಿ ಕೊಟ್ಟಿದ್ದನು.

**ವಚನ 1.** ಇದಕ್ಕೆ ಮುಂಚೆ, ಯೋಹಾನನು ಒಬ್ಬ ಬಲಿಷ್ಠ ದೇವದೂತನು "ಈ ಸುರುಳಿಯನ್ನು ಬಿಚ್ಚುವದಕ್ಕೂ ಅದರ ಮುದ್ರೆಗಳನ್ನು ಒಡೆಯುವದಕ್ಕೂ ಯಾವನು ಯೋಗ್ಯನು?" ಎಂದು ಕೂಗುವದನ್ನು ಕಂಡಿದ್ದನು (5:2). ಈಗ **ಬಲಿಷ್ಠನಾದ ಮತ್ತೊಬ್ಬ ದೇವದೂತನು** ಕಾಣಿಸಿಕೊಂಡಿದ್ದನು. KJVಯು "ಪರಾಕ್ರಮಿ" ಎಂಬ ಪದವನ್ನು ಬಳಸುತ್ತದೆ. ದೇವದೂತರೆಲ್ಲರೂ ಪರಾಕ್ರಮಿಗಳು ಅಥವಾ ಬಲಿಷ್ಠರಾಗಿದ್ದಾರೆ (ನೋಡಿರಿ ಕೀರ್ತನೆ 103:20), ಆದರೆ ಕೆಲವರು ಮಿಕ್ಕವರಿಗಿಂತ ಬಲಿಷ್ಠರೆಂದು ಕಾಣಿಸುತ್ತದೆ. ಅವರು ಮಿಕ್ಕವರಿಗಿಂತ ಹೆಚ್ಚು ಶಕ್ತಿ ಮತ್ತು ಅಧಿಕಾರವುಳ್ಳವರು ಎಂಬ ಅರ್ಥದಲ್ಲಿ ಅಧಿಕ ಬಲಿಷ್ಠರಾಗಿದ್ದಾರೆ.

1ನೆ ವಚನದಲ್ಲಿ ಬಲಿಷ್ಠ ದೇವದೂತನ ವರ್ಣನೆಯು ಈ ಮುಂಚೆ ತಂದೆ ಹಾಗೂ ಮಗ ಇಬ್ಬರಿಗೂ ಸಂಬಂಧ ಪಟ್ಟಂತೆ ಬಳಸಿದ ಮಾತುಗಳನ್ನು ಜ್ಞಾಪಿಸುತ್ತವೆ: ದೇವದೂತನು

**ಮೇಘವನ್ನು ಧರಿಸಿಕೊಂಡಿದ್ದನು**, ಮತ್ತು ಯೇಸುವು “ಮೇಘಗಳೊಂದಿಗೆ ಬರುತ್ತಾನೆ” (1:7) ಈ ಸಂದೇಶಕನ **ತಲೆಯ ಮೇಲೆ ಮುಗಿಲುಬಿಲ್ಲು ಇತ್ತು**, ಮತ್ತು “ಸಿಂಹಾಸನದ ಸುತ್ತಲು . . . ಮುಗಿಲುಬಿಲ್ಲು ಇತ್ತು” (4:3). ದೇವದೂತನ ಮುಖವು **ಸೂರ್ಯನೋಪಾದಿಯಲ್ಲಿತ್ತು**, ಮತ್ತು ಮನುಷ್ಯಕುಮಾರನ ದರ್ಶನದಲ್ಲಿ, ಯೇಸುವಿನ ಮುಖವು “ಮಧ್ಯಾಹ್ನದ ಪ್ರಕಾಶಿಸುವ ಸೂರ್ಯನಂತಿತ್ತು” (1:16). ದೇವದೂತನ **ಪಾದಗಳು ಬೆಂಕಿಯ ಕಂಬಗಳಂತಿದ್ದವು**, ಅದು ನಮಗೆ “ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆ” ಇದ್ದ ಯೇಸುವಿನ ಪಾದಗಳನ್ನು ಜ್ಞಾಪಿಸುತ್ತವೆ (1:15).

ಈ ವಿವರಗಳೆಲ್ಲಾ - ದೇವದೂತನು ಪರಲೋಕದಿಂದ ಬಂದನು ಎಂಬ ವಾಸ್ತವಾಂಶದೊಂದಿಗೆ - ಆತನು ಕರ್ತನ ಒಬ್ಬ ನಿಯೋಗಿಯಾಗಿದ್ದನು ಎಂಬುದನ್ನು ಒತ್ತಿ ಹೇಳುತ್ತವೆ. ಕೆಲವರು ಈ ದೇವದೂತನು ಸ್ವತಃ ಯೇಸುವೇ ಆಗಿದ್ದನು ಎಂದು ಯೋಚಿಸುತ್ತಾರೆ, ಆದರೆ ಅದು ಹಾಗಿರುವದಕ್ಕೆ ಸಾಧ್ಯವಿಲ್ಲ: (1) ಯೇಸುವು ಪುಸ್ತಕದಲ್ಲಿ ಬೇರೆ ಎಲ್ಲಿಯೂ ದೇವದೂತನೆಂದು ಕರೆಯಲ್ಪಟ್ಟಿರುವದಿಲ್ಲ. (2) “ಮತ್ತೊಬ್ಬ” ಎಂಬ ಪದವು ἄλλος (*allos*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದ್ದು ಅದರರ್ಥವು “*ಅದೇ ರೀತಿಯ* ಮತ್ತೊಬ್ಬನು” ಎಂದಾಗಿದೆ. (3) ಮಹಿಮಕರಣಗೊಂಡ ಕರ್ತನು ಆ ದೇವದೂತನು 6ನೇ ವಚನದಲ್ಲಿ ಆಣೆಯಿಟ್ಟ ರೀತಿಯಲ್ಲಿ ಆಣೆಯಿಡುವದನ್ನು ಊಹಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ಆ ದೇವದೂತನನ್ನು ಯಾವದೋ ನಿರ್ದಿಷ್ಟ ದೂತನಾಗಿದ್ದನೆಂದು ಗುರುತಿಸುವ ಪ್ರಯತ್ನಗಳು ನಡೆದಿರುತ್ತವೆ, ಉದಾಹರಣೆಗೆ ಗಾಬ್ರಿಯೇಲ, ಅಥವಾ ಇತಿಹಾಸದಲ್ಲಿದ್ದ ಯಾವನೋ ಒಬ್ಬ ಮನುಷ್ಯನು ಎಂಬುದೆ. ವಾಕ್ಯಭಾಗಕ್ಕೆ ಸಂಬಂಧ ಪಟ್ಟಂತೆ ನೋಡುವದಾದರೆ, ಈ ವ್ಯಕ್ತಿಯು ಕೇವಲ ಕರ್ತನ ಸೇವೆಯನ್ನು ನಡಿಸುವಂತೆ ಕರೆಯಲ್ಪಟ್ಟಿದ್ದ “ಬಲಿಷ್ಠನಾದ [ಹೆಸರಿಸಲ್ಪಡದ] ಮತ್ತೊಬ್ಬ ದೇವದೂತನು” ಅಷ್ಟೇ ಆಗಿದ್ದನು.

ನ್ಯಾಯತೀರ್ಪಿನ ಸಂಕೇತಗಳ (ಮೇಘ, ಸೂರ್ಯ, ಬೆಂಕಿಯ ಕಂಬ) ಮತ್ತು ಕನಿಕರದ ಸಂಕೇತದ (ಮುಗಿಲುಬಿಲ್ಲ; 4:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಸಮ್ಮಿಲನಗೊಳಿಸುವಿಕೆಯು ದೇವದೂತನು ತಂದ ಸಂದೇಶದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ: ನ್ಯಾಯತೀರ್ಪು ಮತ್ತು ಕರುಣೆಗಳ ಒಂದು ಕಹಿಯುಳ್ಳ ಸಿಹಿಯ ಸಂದೇಶ (ವಚನಗಳು 9, 10).

**ವಚನ 2.** ಸಂದೇಶವು **ಬಿಚ್ಚಿದ್ದ ಒಂದು ಚಿಕ್ಕ ಸುರುಳಿ**ಯಲ್ಲಿ ಇತ್ತು. ಈ ಚಿಕ್ಕ, ಬಿಚ್ಚಲ್ಪಟ್ಟಿದ್ದ ಸುರುಳಿಯು ಈ ಅಧ್ಯಾಯದ ಪ್ರಮುಖ ಗಮನವನ್ನು ಹೊಂದಿರುತ್ತದೆ; ಇದು ನೇರವಾಗಿ ಅಥವಾ ಪರೋಕ್ಷವಾಗಿ ಹನ್ನೊಂದು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ. ಅಧ್ಯಾಯದ ಆರಂಭದಲ್ಲಿನ ವಿವರಗಳು ದೇವರಿಂದ ಕಳುಹಿಸಲ್ಪಟ್ಟ ಈ ಅಮೂಲ್ಯ ಮುತ್ತಿಗಾಗಿ ವೇದಿಕೆಯನ್ನು ಸಿದ್ಧಗೊಳಿಸುವದಾಗಿದ್ದು ಇದರ ಪ್ರಾಮುಖ್ಯತೆಯನ್ನು ಒತ್ತಿ ಹೇಳುವದಾಗಿದೆ. Leon Morrisನು ಹೀಗೆ ಬರೆದನು,

> ಲೋಕವು ಕ್ರೈಸ್ತರನ್ನು ಒಂದು ಮಹತ್ವವಿಲ್ಲದ ಚಿಕ್ಕ ಸಭೆಯ ಸದಸ್ಯರೆಂದು ಅಸಡ್ಡೆ ಮಾಡಿತು. ಅವರು ಪ್ರತಿನಿಧಿಸುವ ಸಮಸ್ತವನ್ನು ಅದು ಲೆಕ್ಕಕ್ಕೆ ಇಲ್ಲದ್ದೆಂದು ಪರಿಗಣಿಸಿತು. ಆದರೆ ಅವರ ನಂಬಿಕೆಯು ದೇವರ ವಾಕ್ಯದ ಮೇಲೆ ಆಧಾರಗೊಂಡಿತ್ತು ಮತ್ತು ಆ ವಾಕ್ಯವೇ ಈ ದೈತ್ಯದೇಹಿಯ ಕೈಗಳಲ್ಲಿರುತ್ತದೆ, ಆತನು . . . ಸಮುದ್ರ ಮತ್ತು ಭೂಮಿಗಳೆರಡನ್ನೂ ಆಕ್ರಮಿಸಿದ್ದನು. ದೇವರ ವಾಕ್ಯವು ಉತ್ಕೃಷ್ಟವಾಗಿ ಮಹತ್ವಪೂರ್ಣವಾದದ್ದು. ಅದು ಮನುಷ್ಯನ ಸಕಲ ಕೆಲಸಗಳನ್ನೂ ಮೀರಿ ನಿಲ್ಲುವದಾಗಿದೆ.[1]

Morrisನು ಚಿಕ್ಕ ಸುರುಳಿಯನ್ನು "ದೇವರ ವಾಕ್ಯ" ಎಂದು ಕರೆದನೆಂಬುದನ್ನು ಗಮನಿಸಿರಿ. ಆತನು ಅದನ್ನು ಹಾಗೆ ಗುರುತಿಸಿದ್ದು ಈ ಪ್ರಶ್ನೆಯನ್ನು ಉದ್ಭವಗೊಳಿಸುತ್ತದೆ: "'ಚಿಕ್ಕ ಸುರುಳಿ' ಏನಾಗಿತ್ತು?" ಒಂದು ಪ್ರಮಾಣದ ಖಚಿತತೆಯೊಂದಿಗೆ ಕೆಲವೊಂದು ಹೇಳಿಕೆಗಳನ್ನು ನೀಡಬಹುದಾಗಿದೆ. (1) ಸುರುಳಿಯು ದೇವರ ಒಟ್ಟಾರೆಯಾದ ಯೋಜನೆಗಳು ಮತ್ತು ಉದ್ದೇಶಗಳಿಗೆ ಸಂಬಂಧ ಪಟ್ಟದ್ದಾಗಿತ್ತು (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). (2) ಅದು ಸುವಾರ್ತೆಯೊಂದಿಗೆ ಸಂಬಂಧಿಸಿತ್ತು: "ಶುಭವರ್ತಮಾನವಾಗಿ ತಿಳಿಸಿದ್ದ" ("ಸಾರಿದ್ದ," KJV) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು εὐαγγελίζω (*euangelizō*) ಎಂದಾಗಿದ್ದು, ಅದರ ಅರ್ಥವು "ಸುವಾರ್ತೆ ಸಾರು" ಎಂದಾಗಿರುತ್ತದೆ. *Euangelizō* ಎಂಬುದು "ಸುವಾರ್ತೆ" ಅಥವಾ "ಶುಭವಾರ್ತೆ" (εὐαγγέλιον, *euangelion*) ಎಂಬ ಅರ್ಥವನ್ನು ಹೊಂದಿರುವ ಗ್ರೀಕ್ ಪದಕ್ಕೆ ಸಂಬಂಧಿಸಿದ್ದಾಗಿದೆ. (3) ಅದರ ಸಂದೇಶವು ಕಹಿ ಮತ್ತು ಸಿಹಿ ಎರಡೂ ಆಗಿತ್ತು (ವಚನಗಳು 9, 10). (4) ಅದರಲ್ಲಿರುವ ಸಂಗತಿಗಳು ಯೋಹಾನನ ಪ್ರವಾದಿಸುವ ಕೆಲಸಕ್ಕೆ ಸಂಬಂಧಿಸಿದ್ದವು: ಯೋಹಾನನು ಸುರುಳಿಯನ್ನು ತಿಂದ ಬಳಿಕ, ಆತನು ಆ ಕೆಲಸವನ್ನು ಆರಂಭಿಸುವದಕ್ಕೆ ಸಿದ್ಧನಾಗಿದ್ದನು (ವಚನಗಳು 10, 11).

ಅಷ್ಟುಮಾತ್ರವಲ್ಲದೆ ಈ "ಚಿಕ್ಕ ಸುರುಳಿ" ಯು ಎರಡು ಕಾರಣಗಳಿಗಾಗಿ 5ನೇ ಅಧ್ಯಾಯದಲ್ಲಿನ ಮುದ್ರೆ ಹಾಕಲ್ಪಟ್ಟ ಸುರುಳಿಯಾಗಿರುವದಿಲ್ಲ: (1) 5ನೇ ಅಧ್ಯಾಯದಲ್ಲಿರುವಂಥದು ಸಹಜವಾದ ಗಾತ್ರದಲ್ಲಿತ್ತೆಂಬುದು ಸ್ಪಷ್ಟವಾಗಿರುತ್ತದೆ, ಆದರೆ ಇದನ್ನು "ಸಣ್ಣ" ಅಥವಾ "ಚಿಕ್ಕ" ಎಂದು ಕರೆಯಲಾಗಿರುತ್ತದೆ. ಕನ್ನಡದಲ್ಲಿ ಇದನ್ನು "ಒಂದು ಕಿರುಹೊತ್ತಿಗೆ" ಎಂದು ಕರೆಯಬಹುದು. (2) 5ನೇ ಅಧ್ಯಾಯದಲ್ಲಿರುವಂಥದು ಮುದ್ರೆ ಹಾಕಲ್ಪಟ್ಟದ್ದಾಗಿ ಆಂಭಗೊಂಡಿದ್ದರೆ, ಇದು ಬಿಚ್ಚಿದ್ದ ಸುರುಳಿಯಾಗಿತ್ತು. ಇಲ್ಲಿ ಬಳಸಲಾಗಿರುವ ಕ್ರಿಯಾಪದದ ಕಾಲರೂಪವು ಇಅದು ಬಿಚ್ಚಿದ್ದಾಗಿ ಆರಂಭಿಸಿತು ಮತ್ತು ಬಿಚ್ಚಿದ್ದಾಗಿಯೇ ಉಳಿಯುವದು ಎಂಬುದನ್ನು ಸೂಚಿಸುತ್ತದೆ.

ಈ ಚಿಕ್ಕ ಸುರುಳಿಯು ಬೈಬಲಿನ ಒಂದು ಭಾಗವಾಗಿತ್ತದೆಂದು ಬಹಳಷ್ಟು ಲೇಖಕರು ಮನವರಿಕೆಗೊಂಡಿರುತ್ತಾರೆ. ಕೆಲವರು ಇದು ಪ್ರಕಟನೆ ಪುಸ್ತಕಕ್ಕೆ ಹಿನ್ನಲೆಯನ್ನು ಒದಗಿಸಿದ ಹಳೆಯ ಒಡಂಬಡಿಕೆಯ ವಿಭಾಗಗಳನ್ನೊಳಗೊಂಡಿತ್ತು ಎಂದು ನಂಬುತ್ತಾರೆ. ಇನ್ನು ಕೆಲವರು ಈ ಸುರುಳಿಯು ಸಂಪೂರ್ಣವಾಗಿ ಹೊಸ ಒಡಂಬಡಿಕೆಯೇ ಆಗಿತ್ತೆಂದು ಮನವರಿಕೆ ಹೊಂದಿರುತ್ತಾರೆ. ಹೆಚ್ಚು ಸಾಮಾನ್ಯವಾಗಿರುವ ವಿವರಣೆಯೆಂದರೆ ಈ ಚಿಕ್ಕ ಸುರುಳಿಯು ಈ ಮುಂಚೆ ಯೋಹಾನನಿಗೆ ಪ್ರಕಟಗೊಳಿಸಿರದಂಥ ಪ್ರಕಟನೆ ಪುಸ್ತಕದ ಒಂದು ಭಾಗವನ್ನೊಳಗೊಂಡಿತ್ತು ಎಂಬುದೆ: ಬಹುಶಃ 11ನೇ ಅಧ್ಯಾಯ, ಅಥವಾ ಬಹಳ ಸಂಭಾವ್ಯವಾಗಿ 12ನೇ ಅಧ್ಯಾಯದಿಂದ ಪುಸ್ತಕದ ಕೊನೆಯ ವರೆಗಿನ ಭಾಗ. ಈ ಎರಡನೆಯ ವ್ಯಾಖ್ಯಾನದ ವಿಷಯದಲ್ಲಿ ನೋಡುವದಾದರೆ, ಚಿಕ್ಕ ಸುರುಳಿಯು ಯೋಹಾನನನ್ನು "ರಾಜ" ರಿಗೆ ಸಾರುವದಕ್ಕೆ ಅರ್ಹನನ್ನಾಗಿಸಿತು (ವ. 11), ಮತ್ತು 17ನೇ ಅಧ್ಯಾಯವು ರಾಜರ ಕುರಿತು ಬಹಳವಾಗಿ ಮಾತಾಡುವದಾಗಿದೆ. ಇನ್ನೊಂದು ಸಾಧ್ಯತೆಯು ಏನೆಂದರೆ ಈ ಚಿಕ್ಕ ಸುರುಳಿಯು 11ನೇ ವಚನದಲ್ಲಿರುವ ರೀತಿಯ ಸಂದೇಶವೊಂದನ್ನು ಒಳಗೊಂಡಿತ್ತಷ್ಟೆ ಎಂಬುದೆ: "ಇನ್ನೂ ನೀನು . . . ಪ್ರವಾದನೆ ಹೇಳಬೇಕು." ಕರ್ತನಿಗೋಸ್ಕರ ಮಾತಾಡುವದೆಂದರೆ ಆತನಿಗಾಗಿ ಎದುರಿಸಿ ನಿಲ್ಲುವದು ಸೇರಿದಂತೆ ಏನೇನು ಅಗತ್ಯವಿರುತ್ತದೆಂಬುದನ್ನು ತಿಳಿದಿದ್ದನಾದ್ದರಿಂದ, ಸಾರುವದನ್ನು ಮುಂದುವರೆಸುವದು ಒಂದು ಕಹಿಯುಳ್ಳ ಸಿಹಿ ಸಂದೇಶವಾಗಿದ್ದಿರಬಹುದಾಗಿದೆ.

ಚಿಕ್ಕ ಸುರುಳಿಯಲ್ಲಿ ನಿಖರವಾಗಿ ಏನಿತ್ತೆಂಬುದನ್ನು ವಾಕ್ಯಭಾಗವು

ತಿಳಿಯಪಡಿಸುವದಿಲ್ಲವಾದ್ದರಿಂದ, ಆ ವಿಷಯವಾಗಿ ಒಬ್ಬನು ಅದು ಹೀಗೆಯೇ ಇರುತ್ತದೆಂದು ಮೊಂಡು ವಾದ ಮಾಡಲಾಗದು. ಹೇಗೂ, ಒಬ್ಬನು ಈ ವಿಷಯದಲ್ಲಿ ಮಾತ್ರ ಹೀಗೆಯೇ ಎಂದು ವಾದಿಸಬಹುದು: ಚಿಕ್ಕ ಸುರುಳಿಯು ದೇವರಿಂದ ಬಂದ ಸಂದೇಶವೊಂದನ್ನು ಒಳಗೊಂಡಿತ್ತು - ಮತ್ತು ಅದು ಅತ್ಯಂಥ ಪ್ರಾಮುಖ್ಯವಾಗಿತ್ತು. ದೇವರು ಮಾತಾಡುವಾಗಲೆಲ್ಲಾ, ಜನರು ಕೇಳಿಸಿಕೊಳ್ಳುವದಕ್ಕೆ ಸಿದ್ಧರಾಗಿರಬೇಕು (ಕೀರ್ತನೆ 81:8, 11, 13).

ಸಂದೇಶದ ಪ್ರಾಮುಖ್ಯತೆಯು ಮುಂದಿನ ವಿವರಣೆಯಲ್ಲಿ ಒತ್ತಿ ಹೇಳಲ್ಪಡುತ್ತದೆ: ಪರಲೋಕದ ಸಂದೇಶಕನು **ಬಲಗಾಲನ್ನು ಸಮುದ್ರದ ಮೇಲೆಯೂ ಎಡಗಾಲನ್ನು ಭೂಮಿಯ ಮೇಲೆಯೂ ಇಟ್ಟು** ಇದ್ದನು. ಈ ವಿವರಣೆಯು 10ನೇ ಅಧ್ಯಾಯದಲ್ಲಿ ಮೂರು ಸಾರಿ ಪ್ರಸ್ತಾಪಿಸಲ್ಪಟ್ಟಿದೆ (ವಚನಗಳು 2, 5, 8), ಅದು ವಿಶೇಷ ಮಹತ್ವಪೂರ್ಣತೆಯನ್ನು ಸೂಚಿಸುತ್ತದೆ. ದೇವದೂತನ ಭಂಗಿಯು ಒಬ್ಬ ಜಯಿಸುವ ವೀರನದ್ದಾಗಿತ್ತು. ಆತನು ತನ್ನ ಕಾಲನ್ನು ಭೂಮಿಯ ಮತ್ತು ಸಮುದ್ರದ ಮೇಲೆ ಇಟ್ಟಿದ್ದನೆಂಬುದು ಎರಡರ ಮೇಲೆಯೂ ಆತನಿಗಿರುವ ಅಧಿಕಾರವನ್ನು ಸೂಚಿಸುತ್ತದೆ. ಅಲ್ಲದೆ ಆತನು ತಂದ ಸಂದೇಶವು ಜಾಗತಿಕ ವಿಶಾಲತೆಯನ್ನು ಹೊಂದಿತ್ತೆಂಬುದನ್ನು ಸಹ ಸೂಚಿಸುತ್ತದೆ. ದೇವದೂತನು ಮಹಾ ಶಬ್ದದಿಂದ ಇಡೀ ಸೃಷ್ಟಿಗೆ ಕೇಳಿಸಿರಬಹುದಾದ ಸ್ವರದೊಂದಿಗೆ (ನೋಡಿರಿ 5:2, 3) ಕೂಗಿದನು ಎಂಬ ವಾಸ್ತವಾಂಶದಿಂದ ಈ ನಿರ್ಣಯವು ಪುನರ್ದೃಢೀಕರಿಸಲ್ಪಡುತ್ತದೆ (ವ. 3). ಅದು ಅಧ್ಯಾಯದ ಮುಕ್ತಾಯ ಮಾತುಗಳಲ್ಲಿ ಮತ್ತಷ್ಟು ದೃಢಪಡಿಸಲ್ಪಡುತ್ತದೆ, ಅದು ಯೋಹಾನನ ಸಾರುವಿಕೆಯು "ಅನೇಕವಾಗಿರುವ ಪ್ರಜೆ ಜನ ಭಾಷೆ ರಾಜ ಇವರ" ವಿಷಯವನ್ನೊಳಗೊಂಡಿತ್ತು ಎಂಬುದನ್ನು ಒತ್ತಿ ಹೇಳುತ್ತದೆ (ವ. 11) - ಪ್ರಕಟನೆ ಪುಸ್ತಕದೊಳಗೆ ಬೇರೆ ಕಡೆಯಲ್ಲಿ ನೀಡಲಾಗಿರುವ ಪಟ್ಟಿಯು ಪ್ರತಿಯೊಂದು ಕಡೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೆಂದು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ (ನೋಡಿರಿ 7:9; 11:9; 17:15). ದೇವರು ತನ್ನ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಪ್ರಕಟಗೊಳಿಸುವದು ಕೇವಲ ಆಯ್ದ ಕೆಲವರಿಗಾಗಿ ಮಾತ್ರವೇ ಇರುವದಿಲ್ಲ. ಅದು "ಲೋಕಕ್ಕೆಲ್ಲಾ" (ಮಾರ್ಕ 16:15), "ಎಲ್ಲಾ ದೇಶಗಳಿಗೆ" (ಮತ್ತಾಯ 28:19) ಆಗಿರುತ್ತದೆ, "ಎಲ್ಲಾ ಮನುಷ್ಯರಿಗೆ" ಆಗಿರುತ್ತದೆ (1 ತಿಮೊಥೆ 2:4; ತೀತನಿಗೆ 2:11).

ಈ ಚಿಕ್ಕ ಸುರುಳಿಯ ಹೆಚ್ಚು ಮಹತ್ವಪೂರ್ಣವಾದ ಅಂಶವೆಂದರೆ ಅದು **ಬಿಚ್ಚಿದ್ದ** ಸುರುಳಿಯಾಗಿತ್ತು, ಅದು ಸಂದೇಶವನ್ನು ಸಕಲ ಕಣ್ಣುಗಳಿಗೆ ಕಾಣುವದಕ್ಕೆ ಲಭ್ಯವಾಗಿಸಿತ್ತು. ದೇವರು "ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವು ದೊರೆಯುವಂತೆ" (2 ಪೇತ್ರ 1:3) ಮಾಡಿದ್ದಾನೆಂಬುದನ್ನು ತಿಳಿಯುವದು ಅದ್ಭುತವಾಗಿರುತ್ತದೆ. ಕ್ರೈಸ್ತ ಜೀವಿತವನ್ನು ಜೀವಿಸುವದಕ್ಕೆ ಮತ್ತು ಅವರು ಸತ್ತಾಗ ಪರಲೋಕಕ್ಕೆ ಹೋಗಲು ತಿಳಿದುಕೊಳ್ಳಬೇಕಾದದ್ದೆಲ್ಲವನ್ನೂ ಆತನು ಜನರಿಗೆ ಪ್ರಕಟಗೊಳಿಸಿದ್ದಾನೆ.

ಒಂದು ಕಡೆಯಲ್ಲಿ, ಜನರು ಸಮಸ್ತವನ್ನೂ ತಿಳಿದಿರಬೇಕಾದ ಅಗತ್ಯವಿಲ್ಲ; ಕೆಲವು ಸತ್ಯಗಳನ್ನು ತಂದೆಯು ಬಯಲುಗೊಳಿಸಿರುವದಿಲ್ಲವಷ್ಟೆ. ಕೆಲವು ಸತ್ಯಗಳು ದೇವರ ಮಕ್ಕಳಿಗೆ ಪ್ರಾಮುಖ್ಯವಾಗಿದ್ದಾಗ್ಯೂ ಅವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿರುವದಿಲ್ಲ (ಯೆಶಾಯ 55:8, 9). "ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು" (ಧರ್ಮೋಪದೇಶಕಾಂಡ 29:29). ಒಬ್ಬರು ಹೀಗೆ ಹೇಳಿದ್ದಾರೆ, "ಗೌಪ್ಯವಾಗಿಡಲ್ಪಟ್ಟಿರುವದು ಪ್ರಕಟಗೊಂಡಿರುವದರಷ್ಟೇ ಮಹತ್ವಪೂರ್ಣವಾದದ್ದು." ಜನರು ತಿಳಿದುಕೊಳ್ಳಲು ಬಯಸುವ ಸಂಗತಿಗಳು ಇದ್ದಾವೆ; ಅವರು ಉತ್ತರಗಳನ್ನು ಹೊಂದಲಿಚ್ಚಿಸುವ ಪ್ರಶ್ನೆಗಳನ್ನು ಹೊಂದಿದ್ದು ಅವುಗಳ ವಿಷಯವಾಗಿ ಬೈಬಲ್ ಒಂದು ಸಮಾಧಿಯಂತೆ ಮೌನವಾಗಿರುತ್ತದೆ. ಜನರ ಕುತೂಹಲವನ್ನು ತೃಪ್ತಪಡಿಸುವದಕ್ಕಾಗಿ

ಬೈಬಲ್ ಬರೆಯಲ್ಪಡಲಿಲ್ಲ, ಆದರೆ ಅವರಿಗೆ "ಉಪದೇಶಕ್ಕೂ ತಿದ್ದುಪಾಟಿಗೂ ನೀತಿಶಿಕ್ಷೆಗೂ" (2 ತಿಮೊಥೆ 3:16) ಅವಶ್ಯಕವಾದದ್ದನ್ನು ಕೊಡುವದಕ್ಕಾಗಿ ಬರೆಯಲ್ಪಟ್ಟಿರುತ್ತದೆ ಎಂಬುದನ್ನು ಒಬ್ಬನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಮುಂದಿನ ಘಟನಾವಳಿಗಳು ಕೆಲವು ಸಾರಿ ದೇವರು ತನ್ನ ಜನರಿಗೆ ತಿಳಿದುಕೊಳ್ಳಲು ಅತ್ಯಾವಶ್ಯಕವಲ್ಲದ ಮಾಹಿತಿಯನ್ನು ಹಿಡಿದಿಟ್ಟುಕೊಳ್ಳುತ್ತಾನೆಂಬ ಸತ್ಯವನ್ನು ನಾಟಕೀಯವಾಗಿ ದೃಷ್ಟಾಂತಪಡಿಸುತ್ತವೆ.

**ವಚನ 3.** ದೇವದೂತನು **ಸಿಂಹವು ಗರ್ಜಿಸುವ ಪ್ರಕಾರ ಮಹಾ ಶಬ್ದದಿಂದ ಕೂಗಿದನು** [ನೋಡಿರಿ ಯೆರೆಮೀಯ 25:30; ಹೋಶೇಯ 11:10; ಯೋವೇಲ 3:16; ಆಮೋಸ 3:8]; **ಕೂಗಿದಾಗ ಏಳು ಗುಡುಗುಗಳು ಒಂದೊಂದಾಗಿ ಧ್ವನಿಕೊಟ್ಟವು. ಏಳು ಗುಡುಗುಗಳು** ಎಂಬ ಪದಗುಚ್ಛವು ನಮ್ಮ ಗಮನವನ್ನು ಸೆಳೆದುಕೊಳ್ಳುತ್ತದೆ. "ಏಳು ಗುಡುಗುಗಳು" (KJV) ಎಂಬುದು ವಾಕ್ಯದ ಒಂದು ಅಕ್ಷರಶಃ ಅನುವಾದವಾಗಿದೆ. ಇದಕ್ಕೆ ಮುಂಚೆ ಏಳು ಸಭೆಗಳಿಗೆ ಪತ್ರಗಳು, ಏಳು ಮುದ್ರೆಗಳುಳ್ಳ ಒಂದು ಸುರುಳಿ, ಮತ್ತು ಏಳು ತುತೂರಿಗಳನ್ನು ನೋಡಿದ್ದೇವೆ. ಈಗ "ಏಳು ಗುಡುಗುಗಳು" (KJV) ಇರುತ್ತವೆ ವಾಚಕನು ಏನನ್ನೋ ಎದುರು ನೋಡುತ್ತಾ ಮುಂದಕ್ಕೆ ಬಾಗುತ್ತಾನೆ; ಗುಡುಗುಗಳು ಯೋಹಾನನಿಗೆ - ಮತ್ತು ಪ್ರತಿಯೊಬ್ಬ ಕ್ರೈಸ್ತನಿಗೆ - ಏನು ಹೇಳುತ್ತವೆ?

**ವಚನ 4. ಏಳು ಗುಡುಗುಗಳು ನುಡಿದಾಗ,** ಯೋಹಾನನು **ಬರೆಯಬೇಕೆಂದಿದ್ದೆನು** ಎಂದು ಹೇಳುತ್ತಾನೆ. ಈ ಮಾತುಗಳು ಪಂದು ಪ್ರಕಟನೆಯ ವೇಳೆ ಅನುಸರಿಸಬೇಕಾದ ಕಾರ್ಯವಿಧಾನದ ಕುರಿತು ಒಂದು ಸುಳಿವು ಕೊಡುತ್ತವೆ. ಸ್ಪಷ್ಟವಾಗಿರುವ ಪ್ರಕಾರ, ಯೋಹಾನನು ದರ್ಶನವನ್ನು ಅನುಭವ ಮಾಡುತ್ತಿರುವಾಗಲೇ, ತಾನು ಕಂಡಿದ್ದನ್ನು ಮತ್ತು ಕೇಳಿದ್ದನ್ನು ಬರೆಯುತ್ತಿದ್ದನು. ಇದು ಒಂದು ಸಹಜವಾದ ಪ್ರತಿಕ್ರಿಯೆಯಾಗಿತ್ತು. ಅಂತೂ, ಆತನಿಗೆ "ನೀನು ನೋಡುವದನ್ನು ಪುಸ್ತಕದಲ್ಲಿ ಬರೆದು" ಇಡು (1:11), ಮತ್ತು ಸೂಚ್ಯಾರ್ಥವಾಗಿರುವ ಹಾಗೆ "ನೀನು ಕೇಳುವದನ್ನು" ಬರೆದಿಡು ಎಂದು ಹೇಳಲಾಗಿತ್ತಷ್ಟೆ. ಆತನಿಗೆ ಹೀಗೆ ಆದೇಶಿಸಲಾಗಿತ್ತು, "ಆದದರಿಂದ ನೀನು ಕಂಡವುಗಳನ್ನು ಈಗ ನಡೆಯುತ್ತಿರುವವುಗಳನ್ನೂ ಮುಂದೆ ಆಗಬೇಕಾದವುಗಳನ್ನೂ ಬರೆ" (1:19). ಆತನು ಏಳು ಗುಡುಗುಗಳ ಸಂದೇಶವನ್ನು ಕೇಳಿಸಿಕೊಂಡಾಗ, ಆತನು ಬಹುಶಃ ತನ್ನ ಆಪು ಹುಲ್ಲಿನ ಲೇಖನಿಯನ್ನು ಶಾಯಿ ಪಾತ್ರೆಯಲ್ಲಿ ಅದ್ದಿ ರೂಢಿಯಂತೆ ಲೇಖನಿಯನ್ನು ಚರ್ಮದ ಸುರುಳಿಯ ಕಡೆಗೆ ತಂದಿರಬಹುದಾಗಿದೆ.

ಕರ್ತನು ಆತನನ್ನು ತಡೆದಾಗ ಅದು ಆತನಿಗೆ ಆಶ್ಚರ್ಯವುಂಟು ಮಾಡಿರಬೇಕು. **ಆದರೆ ಆ ಏಳು ಗುಡುಗುಗಳು ನುಡಿದದ್ದನ್ನು ನೀನು ಬರೆಯದೆ ಗುಪ್ತವಾಗಿಡು ಎಂದು ಹೇಳುವ ಆಕಾಶವಾಣಿಯನ್ನು ಕೇಳಿದೆನು.** ಇದಕ್ಕೆ ಮುಂಚೆ, ಮುದ್ರೆಯೊಂದರ ಮೂರು ಉದ್ದೇಶಗಳನ್ನು ಒತ್ತಿ ಹೇಳಲಾಯಿತು: (1) ಒಡೆಯತ್ವವನ್ನು ಪ್ರಮಾಣೀಕರಿಸುವದು, (2) ಸತ್ಯತೆಯ್ನು ಖಚಿತಪಡಿಸುವದು, (3) ಅದರಲ್ಲಿರುವ ಸಂಗತಿಯನ್ನು ಕಾಪಾಡುವದು (5:1,; 7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಂತ್ಯಕಾಲಿಕ ಸಾಹಿತ್ಯದಲ್ಲಿ, ಮುದ್ರೆಗಳು ಕೆವು ಸಾರಿ ಹೆಚ್ಚುವರಿ ಉದ್ದೇಶವೊಂದನ್ನು ಹೊಂದಿರುತ್ತಿದ್ದವು: ಅದರಲ್ಲಿರುವ ಸಂಗತಿಗಳನ್ನು *ಗೌಪ್ಯವಾಗಿಡುವದು* (ನೋಡಿರಿ ದಾನಿಯೇಲ 12:4; ಪ್ರಕಟನೆ 22:10). 4ನೇ ವಚನದಲ್ಲಿ **ಗುಪ್ತವಾಗಿಡು** (ಮುದ್ರೆಹಾಕು) ಎಂಬುದರ ಅರ್ಥವು ಅವುಗಳನ್ನು **ಬರೆಯದೆ** ಇರು ಎಂಬ ಅರ್ಥವೇ ಆಗಿರುತ್ತದೆ, ಯಾಕೆಂದರೆ ಕಾಗದಕ್ಕೆ ಒಪ್ಪಿಸಲ್ಪಟ್ಟಿರುವದನ್ನು *ಅಕ್ಷರಶಃ* "ಗುಪ್ತವಾಗಿಡುವದು" ಅಸಾಧ್ಯವಾಗಿರುತ್ತದೆ. ತಾನು ಪರದೈಸಿಗೆ ಎತ್ತಲ್ಪಟ್ಟಿರುವ ವೇಳೆ ಕಂಡದ್ದನ್ನು ಹೇಳುವದಕ್ಕೆ

ಅನುಮತಿ ಹೊಂದದಿರುವ ಮನುಷ್ಯನಿಗೆ, ಬಹುಶಃ ಪೌಲನೊಂದಿಗೆ ಹೋಲಿಕೆಯನ್ನು ಮಾಡಬಹುದಾಗಿದೆ (2 ಕೊರಿಂಥ 12:4).

ವ್ಯಾಖ್ಯಾನಕಾರರು ಆ **ಏಳು ಗುಡುಗುಗಳ** ಸಂದೇಶವು *ಏನಾಗಿದೆ* ಎಂಬುದರ ಕುರಿತು ಚರ್ಚಿಸುವದಕ್ಕೆ ಎಷ್ಟೊಂದು ಪುಟಗಳನ್ನು ಬಳಸುತ್ತಾರೆಂಬುದು ನಿಜಕ್ಕೂ ಆಶ್ಚರ್ಯಕರೂ ವಿನೋದಕರವೂ ಆಗಿರುತ್ತದೆ. ಅನೇಕ ವ್ಯಾಖ್ಯಾನಕಾರರು ಪ್ರಕೃತಿಯಲ್ಲಿ ಗಡುಗು ಅನೇಕ ಸಾರಿ ಒಂದು ಬಿರುಗಾಳಿಯ ಎಚ್ಚರಿಕೆಯನ್ನು ಕೊಡುತ್ತದೆ, ಮತ್ತು ಬೈಬಲಿನಲ್ಲಿ ಗುಡುಗು ರೌದ್ರತೆ, ಶಕ್ತಿ, ಮತ್ತು ನ್ಯಾಯತೀರ್ಪುಗಳಿಗೆ ಸಂಕೇತವಾಗಿರುತ್ತದೆ ಎಂದು ಗಮನಕ್ಕೆ ತರುತ್ತಾರೆ (ನೋಡಿರಿ ಪ್ರಕಟನೆ 4:5; 6:1; 8:5; 11:19; 14:2; 16:18; 19:6). ಗುಡುಗುಗಳ ಸಂದೇಶವು ಭಕ್ತಹೀನರ ಮೇಲೆ ಬರಲಿದ್ದ ಹೆಚ್ಚುವರಿ ನ್ಯಾಯತೀರ್ಪುಗಳಿಗೆ ಸಂಬಂಧ ಪಟ್ಟದ್ದಾಗಿತ್ತೆಂಬ ಮುಕ್ತಾಯಕ್ಕೆ ಬರುತ್ತಾರೆ. ಅನೇಕರು ಕೀರ್ತನೆ 29ರೊಂದಿಗೆ ಸಂಬಂಧವಿರುವದನ್ನು ಕಾಣುತ್ತಾರೆ, ರಬ್ಬಿಗಳು ಅದನ್ನು "ಏಳು ಗುಡುಗುಗಳ ಕೀರ್ತನೆ" ಎಂದು ಕರೆಯುತ್ತಿದ್ದರು. ಆ ಕೀರ್ತನೆಯಲ್ಲಿ, ಗುಡುಗನ್ನು "ಯೆಹೋವನ ಮಹಾಧ್ವನಿ" ಎಂದು ಕರೆಯಲ್ಪಟ್ಟಿದೆ, ಅದು ಏಳು ಸಾರಿ ಕಾಣಿಸಿಕೊಳ್ಳುವ ಪದಗುಚ್ಛವಾಗಿರುತ್ತದೆ. ಶಾಸ್ತ್ರಗಳಲ್ಲಿ, ದೇವರ ಸ್ವರವು ಅನೇಕ ಸಾರಿ ಗುಡುಗಿಗೆ ಹೋಲಿಸಲಾಗಿರುತ್ತದೆ (ನೋಡಿರಿ ಯೋಬ 26:14; 37:5; ಯೋಹಾನ 12:28, 29). *ಏನು* ಎಂಬುದರ ಜೊತೆಗೆ, ವ್ಯಾಖ್ಯಾನಕಾರರು *ಏಕೆ* ದೇವರು ಏಳು ಗುಡುಗುಗಳ ಸಂದೇಶವನ್ನು ಬರೆಯುವಂತೆ ಯೋಹಾನನಿಗೆ ಅನುಮತಿಸಲಿಲ್ಲ ಎಂಬುದರೊಂದಿಗೆ ಸಹ ಹೋರಾಟ ಪಡುತ್ತಾರೆ. ಅವರು ಅನೇಕ ಕಾರಣಗಳನ್ನು ಮುಂದಿಟ್ಟಿದ್ದು ಅವುಗಳೊಳಗೆ "ದೇವರು ಭಕ್ತಿಹೀನರಿಗೆ ಇನ್ನು ಮೇಲೆ ಎಚ್ಚರಿಕೆ ಕೊಡದಿರುವದಕ್ಕೆ ನಿರ್ಧರಿಸಿದನು" ಎಂಬುದರಿಂದ "ನಮ್ಮ ಮನಸ್ಸು ಅಷ್ಟನ್ನು ಮಾತ್ರವೇ ಹಿಡಿದಿಟ್ಟುಕೊಳ್ಳುವದಕ್ಕೆ ಶಕ್ತವಾಗಿದೆ" ಎನ್ನುವಂತಹ ಸಂಗತಿಗಳು ಸೇರಿರುತ್ತವೆ. ಗುಡುಗು ಏನು ಹೇಳಿತೆಂಬುದನ್ನು ಕ್ರೈಸ್ತರು ತಿಳಿದುಕೊಳ್ಳಬೇಕೆಂಬುದು ದೇವರ ಬಯಕೆಯಾಗಿದ್ದರೆ, ಅದನ್ನು ಬರೆದಿಡುವಂತೆ ಯೋಹಾನನಿಗೆ ಆತನು ಅನುಮತಿ ನೀಡಿರುತ್ತಿದ್ದನು. ಆತನು ಬರೆಯದಂತೆ ಏಕೆ ಯೋಹಾನನನ್ನು ತಡೆದನು ಎಂಬುದು ತನ್ನ ಮಕ್ಕಳಿಗೆ ಗೊತ್ತಾಗಬೇಕೆಂದು ಬಯಸಿದ್ದರೆ ಆತನು ಅದನ್ನು ಅವರಿಗೆ ಹೇಳಿರುತ್ತಿದ್ದನು. ಕೆಲವು ಸಾರಿ ಕರ್ತನು ಮೌನವಾಗಿರುವದನ್ನು ಗೌರವಿಸುವದು ನಮಗೆ ಕಷ್ಟಕರವಾಗಿರುತ್ತದೆ.

ಪ್ರಾಸಂಗೀಕವಾಗಿ, ಏಳು ಗುಡುಗುಗಳ ಸಂದೇಶವನ್ನು ಬರೆಯುವಂತೆ ದೇವರು ಯೋಹಾನನಿಗೆ ಅನುಮತಿ ಕೊಡಲಿಲ್ಲ ಎಂಬ ವಾಸ್ತವಾಂಶದ ಅರ್ಥವು ಕ್ರಿಸ್ತನು ಯಾವಾಗ ಹಿಂದಿರುಗಿ ಬರುವನು ಎಂಬುದನ್ನು ನಿಖರವಾಗಿ, ಮತ್ತು ಆ ಘಟನೆಯ ಮುಂಚೆ ಹಾಗೂ ನಂತರ ಏನಾಗುವದೆಂದು ನಿರ್ದಿಷ್ಟವಾಗಿ ತಿಳಿದದೆ ಎಂದು ಹೇಳಿಕೊಳ್ಳುವವರೊಳಗೆ ಒಬ್ಬನೂ ಈ ಮಾಹಿತಿಯನ್ನು ಹೊಂದಿರುವದಕ್ಕೆ ಸಾಧ್ಯವಿರುವದಿಲ್ಲ ಎಂಬುದೆ. ಒಂದು ಅತ್ಯಾವಶ್ಯಕವಾದ ಒಗಟಿನ ತುಂಡು ಕಾಣೆಯಾಗಿರುವದರಿಂದ, ಅವರು ರಚಿಸುವಂಥ ಯಾವದೇ ಅಂತ್ಯಕಾಲಿಕ ದೃಶ್ಯವು ಸಂಶಯಾತ್ಮಕವಾದದ್ದು - ವಿವಿಧ ವ್ಯಾಖ್ಯಾನಕಾರರು ಈ ವಿಧವಾಗಿ ಗಮನಕ್ಕೆ ತರುವವರಾಗಿದ್ದಾರೆ:

> ಗುಡುಗುಗಳು ಮುದ್ರೆ ಹಾಕಲ್ಪಟ್ಟು ಇಡಲ್ಪಟ್ಟಿವೆ ಎಂಬುದು ಈ ಸುರುಳಿಯ ಆಧಾರದಲ್ಲಿ ಕಾರ್ಯಯೋಜನೆಯ ಪ್ರವಾದನೆಗಳು ಮಾಡುವ ದಿನಾಂಕ ನಿಗದಿ ಮಾಡುವಿಕೆ ವಿರುದ್ಧ ಒಂದು ಎಚ್ಚರಿಕೆಯಾಗಿರುತ್ತದೆ ಎಂಬುದರಲ್ಲಿ ಇನ್ನಷ್ಟು ಪ್ರಯೋಜನವಿರುತ್ತದೆ.[2]

> . . . ಭವಿಷ್ಯದ ಕುರಿತು ಭವಿಷ್ಯವಾಣಿಗಳನ್ನು ನುಡಿಯುವದರಲ್ಲಿ ಎಚ್ಚರಿಕೆಯಿಂದಿರಬೇಕು: ನಾವು ಒಂದು ಅತ್ಯಂಥ ಪ್ರಾಮುಖ್ಯವಾದ ಕಾರಣಾಂಶವನ್ನು ಕೈ ಬಿಡುತ್ತಿರುವ ಸಾಧ್ಯತೆಯಿದೆ![3]
>
> . . . ಈ ಗುಡುಗುಗಳು ಏನು ಹೇಳಿದವೆಂಬುದು ಮನುಷ್ಯರಿಗೆ ಗೊತ್ತಾಗುವ ತನಕ (ಮತ್ತು ಅವರು ಅದನ್ನು ಎಂದಿಗೂ ತಿಳಿಯಲಾರರು), ಈ ಪ್ರವಾದನೆಯಲ್ಲಿ ಮುಂತಿಳಿಸಲಾಗಿರುವ ಘಟನೆಗಳಿಗೆ ಒಂದು ದಿನಾಂಕ ನಿಗದಿ ಪಡಿಸುವಿಕೆಗೆ ಒಂದು ಅಂತ್ಯವನ್ನು ತರತಕ್ಕದ್ದು.[4]

ತಾನು ಅನಿರೀಕ್ಷಿತವಾಗಿ ಬರುವೆನೆಂದು ಯೇಸು ಹೇಳಿದನು (ಮತ್ತಾಯ 24:44; ನೋಡಿರಿ 1 ಥೆಸಲೋನಿಕ 5:2; 2 ಪೇತ್ರ 3:10). ಅಲ್ಲದೆ ಆತನು ಇದನ್ನು ಸಹ ಹೇಳಿದನು, "ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36). ದೇವರ ಮೌನಕ್ಕೆ ನಾವೆಲ್ಲರೂ ಗೌರವವನ್ನು ಕೊಡೋಣ.

**ವಚನ 5.** ಗುಡುಗುಗಳು ಹೇಳಿದ್ದನ್ನು ಬರೆಯಬಾರದೆಂದು ಯೋಹಾನನಿಗೆ ಆದೇಶಿಸಲ್ಪಟ್ಟ ಬಳಿಕ, ಅಲ್ಲೊಂದು ಗಾಂಭೀರ್ಯವಾದ ನಿಶ್ಯಬ್ದವಿತ್ತು. **ಅನಂತರ ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವವನಾಗಿ ನನಗೆ ಕಾಣಿಸಿದ ದೇವದೂತನು ತನ್ನ ಬಲಗೈಯನ್ನು ಪರಲೋಕದ ಕಡೆಗೆ ಎತ್ತಿ**ದನು. ಈ ಸನ್ನೆಯು ಪರಲೋಕದಲ್ಲಿ ವಾಸಿಸುವ ದೇವರ ಮುಂದೆ ಒಂದು ಆಣೆಯನ್ನು ಇಡುವ ವೇಳೆ ಅನುಸರಿಸುತ್ತಿದ್ದ ಒಂದು ಪ್ರಾಚೀನ ಪದ್ಧತಿಯಾಗಿತ್ತು (ನೋಡಿರಿ ಧರ್ಮೋಪದೇಶಕಾಂಡ 32:40; ದಾನಿಯೇಲ 12:7). ಇಂದು ಕೆಲವರು ಕಾನೂನುಬದ್ಧ ಪ್ರಮಾಣಗಳನ್ನು ಬೋಧಿಸುವ ವೇಳೆ ಬೈಬಲಿನ ಮೇಲೆ ಕೈಯನ್ನಿಡುವದಕ್ಕೆ ನಿರಾಕರಿಸುತ್ತಾರೆ, ಆದರೆ ಪರಲೋಕದ ಕಡೆಗೆ ತಮ್ಮ ಕೈಗಳನ್ನೆತ್ತುವದಕ್ಕೆ ಮನಸ್ಸುಳ್ಳವರಾಗಿರುತ್ತಾರೆ. ಬಹುಶಃ ಇವರೆಡೂ ಸನ್ನೆಗಳು ಮೂಲಭೂತವಾಗಿ ಒಂದೇ ಸಂಗತಿಯನ್ನು ಸೂಚಿಸುತ್ತವೆಂಬುದು ಅವರಿಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ.

**ವಚನ 6.** ತರುವಾಯ ದೇವದೂತನು ಪರಲೋಕವನ್ನೂ ಅದರಲ್ಲಿರುವ ಸಮಸ್ತವನ್ನೂ ಭೂಮಿಯನ್ನು ಅದರಲ್ಲಿರುವ ಸಮಸ್ತವನ್ನೂ ಸಮುದ್ರವನ್ನೂ ಅದರಲ್ಲಿರುವ ಸಮಸ್ತವನ್ನೂ ಸೃಷ್ಟಿಸಿ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನ ಮೇಲೆ ಆಣೆಯಿಟ್ಟನು. ದೇವರನ್ನು ಯುಗಯುಗಾಂತರಗಳಲ್ಲಿಯೂ ಜೀವಿಸುವಾತನು ಎಂದು ಬಣ್ಣಿಸಿರುವದು ಮಾಡಲ್ಪಟ್ಟ ಆಣೆಗೆ ನೇರವಾಗಿ ಸಂಬಂಧ ಹೊಂದಿರುತ್ತದೆ: ದೇವರು ನಿತ್ಯನಾಗಿರುವದರಿಂದ ಮತ್ತು ಸಮಸ್ತವನ್ನೂ ಸೃಷ್ಟಿಸಿದವನು ಆಗಿರುವದರಿಂದ, ಆತನು ಎಲ್ಲದರ ಮೇಲೆ ನಿಯಂತ್ರಣ ಹೊಂದಿದ್ದಾನೆ - ಮತ್ತು ತಾನು ಏನು ವಾಗ್ದಾನ ಮಾಡಿದ್ದಾನೋ ಅದನ್ನು ಸಫಲಗೊಳಿಸಬಲ್ಲನು. ಒಂದು ಆಣೆಗೆ ಇದಕ್ಕಿಂತ ಹೆಚ್ಚು ಹೃದಯಸ್ಪರ್ಶಿ ಮುನ್ನುಡಿಯನ್ನು ಕಲ್ಪಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ಬೈಬಲ್ ಕಾಲಗಳಲ್ಲಿ ಮನುಷ್ಯರು ಇಡುತ್ತಿದ್ದ ಹುಡುಗಾಟಿಕೆಯ ಆಣೆಗಳ ವಿರುದ್ಧವಾಗಿ ಬೈಬಲ್ ಕಲಿಸುತ್ತದೆ (ಮತ್ತಾಯ 5:34, 36; ಯಾಕೋಬ 5:12); ನಾವು ನಮ್ಮ ಮಾತಿನಂತೆ ನಡೆಯುವ ಮನುಷ್ಯರಾಗಿದ್ದರೆ, ನಮ್ಮ ಸಂಭಾಷಣೆಯಲ್ಲಿ ಹರ್ಷೋದ್ಗಾರಕ್ಕಾಗಿ ದೈವಿಕ ಸಂಗತಿಗಳನ್ನು ಅಗೌರವಕರವಾಗಿ ಪ್ರಸ್ತಾಪಿಸುವ ಅವಶ್ಯಕತೆಯಿರುವದಿಲ್ಲ. ಇನ್ನೊಂದೆಡೆಯಲ್ಲಿ, ಸರ್ಕಾರಿ ಪ್ರಮಾಣಗಳನ್ನು ಅಥವಾ ಆಣೆಗಳಿಗೆ (ಅರಣ್ಯಕಾಂಡ 5:19; ನೆಹಮೀಯ 5:12; ಮತ್ತಾಯ 26:63, 64) ಮತ್ತು ಕರ್ತನ ಮುಂದೆ ಮಾಡಲ್ಪಡುವ ಗಾಂಭೀರ್ಯವಾದ ವಾಗ್ದಾನಗಳಿಗಾಗಿ (ಹರಕೆಗಳು) ಬೈಬಲ್ ಅನುಮತಿ ಕೊಡುತ್ತದೆ (ಅಪೊಸ್ತಲರ ಕೃತ್ಯಗಳು 18:18; ಇಬ್ರಿಯ 6:16).

ಹರಕೆಯನ್ನು ಮಾಡುವದಕ್ಕೆ ಮುಂಚೆ ಜಾಗರೂಕತೆಯಿಂದ ಯೋಚಿಸಿ ಮಾಡಿರತಕ್ಕದ್ದು - ಮತ್ತು, ಅದನ್ನು ಮಾಡಿ ಬಿಟ್ಟರೆ, ತಪ್ಪದೆ ನೆರವೇರಿಸಲೇ ಬೇಕಾಗಿರುತ್ತದೆ (ಅರಣ್ಯಕಾಂಡ 30:2).

ಗಾಂಭೀರ್ಯವಾದ ಮುನ್ನುಡಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವದಾದರೆ, ಮುಂದೆ ಮಾಡಲಿದ್ದ ಆಣೆಯು ಅಸಹಜವಾದ ಪರಿಣಾಮಗಳನ್ನು ಹೊಂದಿರತಕ್ಕದ್ದಾಗಿರಬೇಕು. ಆಣೆಯ ಮೊದಲನೆಯ ಭಾಗವು **ಇನ್ನು ಸಾವಕಾಶವಿರುವದಿಲ್ಲ**. **ಸಾವಕಾಶ** ಎಂಬುದರ ಬದಲಾಗಿ, KJVಯು "ಕಾಲ" ಎಂದು ಬಳಸುತ್ತದೆ - ಅದು ಒಂದು ಕೆಟ್ಟ ಅನುವಾದವೇನೂ ಅಲ್ಲ ಯಾಕೆಂದರೆ ಗ್ರೀಕ್ ಪದವು ಇಲ್ಲಿ χρόνος (*chronos*) ಎಂದಾಗಿದ್ದು, ಅದು "ಸಮಯ" ಎಂಬುದಕ್ಕಿರುವ ಗ್ರೀಕ್ ಪದಗಳಲ್ಲೊಂದಾಗಿದೆ. *Chronos ಎಂಬ* ಪದದಿಂದಲೇ "ಕಾಲವೃತ್ತಾಂತ" ಎಂಬುದು ಬಂದಿರುತ್ತದೆ. KJVಯ ಅನುವಾದದ ಆಧಾರದಲ್ಲಿ, ವ್ಯಾಪಕವಾಗಿ ಸ್ವೀಕರಿಸಿಕೊಳ್ಳಲ್ಪಟ್ಟಿರುವ, ನಿತ್ಯತ್ವವು ಆರಂಭಗೊಳ್ಳುವಾಗ "ಕಾಲವು ವಿಳಂಭವಾಗದು" ಎಂಬ ಸೂತ್ರವನ್ನು ಮನುಷ್ಯರು ಅಭಿವೃದ್ಧಿ ಪಡಿಸಿರುತ್ತಾರೆ. ಈ ವಿಚಾರವು ಸತ್ಯವಾಗಿರಬಹುದು ಅಥವಾ ಸತ್ಯವಲ್ಲದೆ ಇರಬಹುದಾಗಿದೆ. "ಕಾಲ" ಎಂಬುದು ಜೀವಿತದಲ್ಲಾಗುವ *ಘಟನಾವಳಿಗಳನ್ನು* ಹೇಳುವದಕ್ಕೆ ಬಳಸುವ ಅನುಕೂಲಕರ ರೀತಿಯಾಗಿದೆ ಎಂಬುದನ್ನು ಗಮನಿಸಿರಿ. ನಿತ್ಯತ್ವದಲ್ಲಿ ಘಟನಾವಳಿಗಳು ಇರುವ ಸಾಧ್ಯವಿರುವದರಿಂದ "ಇನ್ನು ಕಾಲವು ವಿಳಂಬವಾಗುವದಿಲ್ಲ" ಎಂದು ಹೇಳುವದು ಸಂಪೂರ್ಣನಿಖರವಾಗಿ ಇರದಿರಬಹುದಾಗಿದೆ. ದೇವದೂತನ ಉದ್ದೇಶವು ಕಾಲದ ಕುರಿತು ಒಂದು ಹೊಸ ಸತ್ಯವನ್ನು ತಿಳಿಸುವದು ಆಗಿರಲಿಲ್ಲ. ಮುಂದೆ 7ನೇ ವಚನದಲ್ಲಿ ಬರುವ ಮಾತುಗಳನ್ನು ನೋಡಿರಿ. ದೇವದೂತನು "ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದು" ಸಮಾಪ್ತಿಯಾಗುವದಕ್ಕೆ ಕಾಲವು ಬಂದದೆ - ಅದು ನೆರವೇರಿಸಲ್ಪಡುವ ವೇಳೆ ಇನ್ನು ಕಾಲವು ಸರಿದು ಹೋಗುವದಿಲ್ಲ - ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ. ಈ *chronos* ಎಂಬುದು "ವಿಳಂಬ" ಎಂದು ಅನುವಾದಿಸಲ್ಪಡಬಲ್ಲದಾದ್ದರಿಂದ (ನೋಡಿರಿ ಇಬ್ರಿಯ 10:37; "ತಡ," KJV), ಮತತ್ಉ "ವಿಳಂಬ" ಎಂಬುದು ವಾಕ್ಯಭಾಗದ ಅರ್ಥವನ್ನು ನಿಖರವಾಗಿ ತಿಳಿಯಪಡಿಸುತ್ತದಾದ್ದರಿಂದ, ಆ ಪದವು NASB, NKJV, ಮತ್ತು ಇತರ ಬಹುತೇಕ ತರ್ಜುಮೆಗಳಲ್ಲಿ ಬಳಸಲ್ಪಟ್ಟಿದೆ.

**ವಚನ 7.** ಆಣೆಯು ಮುಂದುವರೆಯುತ್ತದೆ: **ಏಳನೆಯ ದೇವದೂತನು ಶಬ್ದ ಮಾಡುವ ದಿನಗಳಲ್ಲಿ ಅಂದರೆ ಅವನು ತುತೂರಿಯನ್ನು ಊದುವದಕ್ಕಿರುವ ಸಮಯದಲ್ಲಿ ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದ ಸಂಕಲ್ಪವನ್ನು ತನ್ನ ದಾಸರಾದ ಪ್ರವಾದಿಗಳಿಗೆ ಶುಭವರ್ತಮಾನವಾಗಿ ತಿಳಿಸಿದ್ದ ಪ್ರಕಾರ ನೆರವೇರಿಸುವನು.** ಈ ಗಾಂಭೀರ್ಯವಾದ ಆಣೆಯನ್ನು ಗ್ರಹಿಸಿಕೊಳ್ಳಬೇಕಾದರೆ, **ದೇವರು ಇದುವರೆಗೆ ಗುಪ್ತವಾಗಿಟ್ಟಿದ್ದ** ಎಂಬ ಪದಗುಚ್ಛವನ್ನು ಅರ್ಥಮಾಡಿಕೊಳ್ಳತಕ್ಕದ್ದು.

"ಗುಪ್ತ" ಎಂಬ ಪದವು ಹೊಸ ಒಡಂಬಡಿಕೆಯುದ್ದಕ್ಕೂ ಬಳಸಲ್ಪಟ್ಟಿದೆ (ನೋಡಿರಿ ಮತ್ತಾಯ 13:11; ಲೂಕ 8:10; 1 ಕೊರಿಂಥ 4:1; ಎಫೆಸ 6:19; ಕೊಲೊಸ್ಸೆ 4:3). ಬೈಬಲನ್ನು ಒಂದು ಗುಟ್ಟುಗಳ ಪುಸ್ತಕವಾಗಿ ಮಾಡಿ ಅದರ "ಆಳವಾದ ಸತ್ಯಗಳನ್ನು" ವಿಶೇಷ ಜ್ಞಾನವನ್ನು ಹೊಂದಿರುವ ಆರಿಸಿಕೊಳ್ಳಲ್ಪಟ್ಟ ಕೆಲವರು ಮಾತ್ರವೇ ಅರ್ಥಮಾಡಿಕೊಳ್ಳಬಲ್ಲದ್ದಾಗಿಸುವದಕ್ಕೆ ಪ್ರಯತ್ನಿಸುವವರು ಈ ಪದವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ (2:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಸಾಂದರ್ಭಿಕವಾಗಿ, "ಗುಪ್ತ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಈ ಅರ್ಥವನ್ನು ಹೊಂದಿದೆ (ನೋಡಿರಿ 1 ಕೊರಿಂಥ 13:2; 14:2). ಹೇಗೂ, ನಿಯಮದ ಪ್ರಕಾರ

ಹೊಸ ಒಡಂಬಡಿಕೆಯು "ಗುಪ್ತ" ಎಂಬ ಪದವನ್ನು "ದಿಗ್ಭ್ರಮೆಗೊಳಿಸುವದು ಅಥವಾ ಗ್ರಹಿಕೆಗೆ ಸಿಕ್ಕಲಾರದ್ದು" ಎಂಬ ಅರ್ಥದಲ್ಲಿ ಬಳಸುವದಿಲ್ಲ. ಹೊಸ ಒಡಂಬಡಿಕೆಯಲ್ಲಿ ತಾಂತ್ರಿಕ ಅರ್ಥದಲ್ಲಿ ಬಳಸಲ್ಪಡುವಾಗ, "ಗುಪ್ತ" (ಮರ್ಮ) ಎಂಬುದು ಗತಕಾಲದಲ್ಲಿ ಮರೆಯಾಗಿಡಲ್ಪಟ್ಟಿದ್ದು ಈಗ ಕರ್ತನಿಗೆ ಪ್ರಕಟಗೊಳಿಸಲ್ಪಡುವಂಥದ್ದು ಎಂಬದನ್ನು ಸೂಚಿಸುತ್ತದೆ. ಪ್ರಕಟನೆ ಪುಸ್ತಕದಲ್ಲಿ ಸಹ, "ಗುಪ್ತ" ಎಂಬ ಪದವು ಬಳಸಲ್ಪಡುವಾಗ, ಅದರ ಬಳಿಕ ಸಾಮಾನ್ಯವಾಗಿ ಒಂದು ವಿವರಣೆಯು ಇರುವದಾಗಿದೆ (1:20; 17:5, 7). "ಗುಪ್ತ" ಎಂಬ ಪದದ ಸೂಚ್ಯಾರ್ಥವು ಏನೆಂದರೆ ಕೆಲವೊಂದು ಸತ್ಯಗಳನ್ನು *ದೇವರು* ಪ್ರಕಟಗೊಳಿಸುವದಕ್ಕೆ ಯೋಗ್ಯವಲ್ಲ ಎಂದು ಪರಿಗಣಿಸಿದರೆ ಅವುಗಳನ್ನು ಮನುಷ್ಯನು ಅರ್ಥಮಾಡಿಕೊಳ್ಳಲು ಯಾವ ದಾರಿಯೂ ಇರುವದಿಲ್ಲ. ಆದ್ದರಿಂದಲೇ ಪೌಲನು "ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; *ಈಗಿನ ಕಾಲದಲ್ಲಿ* ದೇವಜನರಿಗೆ ತಿಳಿಸಲ್ಪಟ್ಟಿದೆ" ಎಂದು ಬರೆಯುತ್ತಾನೆ (ಕೊಲೊಸ್ಸೆ 1:26; ಒತ್ತಿ ಹೇಳಿದ್ದು ನನ್ನದು). ಆತನು ಎಫೆಸದವರಿಗೆ ಬರೆಯುವ ವೇಳೆ, ದೇವರು "ರಹಸ್ಯವಾದ ಸಂಕಲ್ಪವನ್ನು ನಮಗೆ *ತಿಳಿಯಪಡಿಸಿದ್ದಾನೆ"* ಎಂದು ಒತ್ತಿ ಹೇಳಿದನು (ಎಫೆಸ 1:9; ಒತ್ತಿ ಹೇಳಿದ್ದು ನನ್ನದು; ನೋಡಿರಿ ಎಫೆಸ 3:3, 4, 9).

"ಇದುವರೆಗೆ ಮರೆಯಾಗಿದ್ದ" ಆದರೆ ಈಗ "ದೇವಜನರಿಗೆ ತಿಳಿಯಪಡಿಸಲ್ಪಟ್ಟಿರುವ [ಅಥವಾ ಬಯಲುಗೊಳಸಲಾಗಿರುವ] ಮರ್ಮ" ಯಾವದು? ಹೊಸ ಒಡಂಬಡಿಕೆಯಲ್ಲಿ, ನಾವು "ದೇವರ ರಾಜ್ಯದ ಗುಟ್ಟು" ಕುರಿತು ಓದುತ್ತೇವೆ (ಮಾರ್ಕ 4:11), ದೇವರ ಯೋಜನೆ ಹಾಗೂ ಉದ್ದೇಶಗಳೊಳಗೆ ಅನ್ಯಜನರು ಹೇಗೆ ಸೇರ್ಪಡೆಗೊಳಿಸಲ್ಪಡುವರು ಎಂಬುದರ ಕುರಿತ "ಗುಪ್ತವಾಗಿದ್ದ ಸಂಗತಿ" ಕುರಿತು (ರೋಮಾ 11:25; ಎಫೆಸ 3:4-6), ಪುನರುತ್ಥಾನದ ವಿಷಯವಾಗಿ "ಗುಪ್ತವಾಗಿದ್ದ ಸಂಗತಿ" ಕುರಿತು (1 ಕೊರಿಂಥ 15:51), ಕ್ರಿಸ್ತನು ಹಾಗೂ ಆತನ ಸಭೆಯ ನಡುವಿನ ಸಂಬಂಧದ ಕುರಿತ "ಮರ್ಮ" ಕುರಿತು (ಎಫೆಸ 5:32), "ಗುಪ್ತವಾಗಿದ್ದ ಸುವಾರ್ತೆಯ ಸತ್ಯಾರ್ಥ" ಕುರಿತು (ಎಫಸ 6:19), "ಕ್ರಿಸ್ತನ ಕುರಿತ ಸತ್ಯಾರ್ಥ" ಕುರಿತು (ಕೊಲೊಸ್ಸೆ 4:3), "ನಂಬಿದವರಿಗೆ ಪ್ರಕಟವಾಗಿರುವ ಸತ್ಯಾರ್ಥ" ಕುರಿತು (1 ತಿಮೊಥೆ 3:9), ಮತ್ತು ನರಾವತಾರದ ವಿಷಯವಾದ "ಸತ್ಯಾರ್ಥ" (ಮರ್ಮ) ಕುರಿತು (1 ತಿಮೊಥೆ 3:16) ಓದುತ್ತೇವೆ. ಈ "ಸತ್ಯಾರ್ಥಗಳು" (ಮರ್ಮಗಳು) ಒಂದು ಮಹಾನ್ "ಮರ್ಮ" ದ ಭಾಗವಾಗಿರುತ್ತವೆ: ಯೇಸುವಿನ ಮೂಲಕವಾಗಿ ವಿಮೋಚಿಸುವ ದೇವರ ಕಾರ್ಯಯೋಜನೆಯೇ.

ಪೌಲನು "ದೇವರು ಗುಪ್ತವಾಗಿಟ್ಟಿದ್ದ ಸಂಕಲ್ಪ" ಎಂಬುದನ್ನು "ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ಕ್ರಿಸ್ತನೇ" ಎಂದು ಅರ್ಥನಿರೂಪಣೆ ಮಾಡುತ್ತಾನೆ (ಕೊಲೊಸ್ಸೆ 2:2, 3). ಕೊಲೊಸ್ಸೆ 1:26, 27ರಲ್ಲಿ, ಆ "ಮರ್ಮವು ಏನೆಂದರೆ ಕ್ರಿಸ್ತನು ನಿಮ್ಮಲ್ಲಿದದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ" ಎಂಬುದಾಗಿ ಅಪೊಸ್ತಲನು ಕರೆಯುತ್ತಾನೆ. ಆತನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ "ಮರ್ಮ" ದ ಕುರಿತು ಬರೆಯುವಾಗ (ನೋಡಿರಿ 3:3, 4, 9), ಆತನು ಸಾರಭೂತವಾಗಿ "ಸುವಾರ್ತೆ" ಕುರಿತಾಗಿ (3:6) ಮತ್ತು "ಸಭೆ"ಯ ಮಹತ್ವಪೂರ್ಣತೆ (3:10) ಕುರಿತಾಗಿ ಮಾತಾಡಿದನು, ಮತ್ತು ಬಳಿಕ ಹೀಗೆ ಹೇಳಿದನು, "ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ" (3:11). ಆತನು "ಅನಾದಿಕಾಲದಿಂದ ಗುಪ್ತವಾಗಿದ್ದ ಮರ್ಮವು ಈಗ ಪ್ರಕಾಶಕ್ಕೆ ಬಂದು ನಿತ್ಯನಾದ ದೇವರ ಅಪ್ಪಣೆಯ ಪ್ರಕಾರ . . . ಅನ್ಯಜನರೆಲ್ಲರಿಗೆ ನಂಬಿಕೆಯೆಂಬ ವಿಧೇಯತ್ವವನ್ನು ಉಂಟು ಮಾಡುವದಕ್ಕೋಸ್ಕರ ತಿಳಿಸಲ್ಪಟ್ಟಿದೆ" ಎಂಬುದರ ಕುರಿತು

ಮಾತಾಡುತ್ತಾ ರೋಮಾಪುರದವರಿಗೆ ಬರೆದ ಪುಸ್ತಕವನ್ನು ಅಂತ್ಯಗೊಳಿಸುತ್ತಾನೆ (ರೋಮಾ 16:25, 26). ಆದದರಿಂದ "ದೇವರು ಗುಪ್ತವಾಗಿಟ್ಟಿದ್ದ ಸಂಕಲ್ಪವು" ಮಾನವರನ್ನು ಯೇಸುವಿನ ಮೂಲಕವಾಗಿ ವಿಮೋಚಿಸುವ ದೇವರ ಯೋಜನೆಯೇ ಆಗಿದೆ.

ದೇವರು ಈ ವಿಮೋಚನೆಯ ಕುರಿತ ಆಶ್ಚರ್ಯಕರವಾದ "ಗುಪ್ತ ಸಂಕಲ್ಪ"ವನ್ನು ತನ್ನ **ದಾಸರಾದ ಪ್ರವಾದಿಗಳಿಗೆ** "ಶುಭವರ್ತಮಾನವಾಗಿ ತಿಳಿದನು" (ಸಾರಿದನು). "ಪ್ರವಾದಿ" ಎಂಬ ಪದವು ದೇವರ ಒಬ್ಬ ಪ್ರೇರಿತ ವಕ್ತಾರನನ್ನು ಸೂಚಿಸುತ್ತದೆ. ಇಲ್ಲಿ ಬಹುಶಃ ಒತ್ತು ಯೆಹೂದಿ ಪ್ರವಾದಿಗಳ ಮೇಲಿರಬಹುದಾಗಿದೆ, ಆದರೆ ಪ್ರಥಮ ಶತಮಾನದಲ್ಲಿ ಕ್ರೈಸ್ತ ಪ್ರವಾದಿಗಳು ಸಹ ಇದ್ದರು (ಅಪೊಸ್ತಲರ ಕೃತ್ಯಗಳು 13:1; 15:32; 21:10; 1 ಕೊರಿಂಥ 12:28, 29; 14:29, 32; ಎಫೆಸ 2:20; 3:5; 4:11).

ಏಳನೆಯ ತುತೂರಿಯು ಊದಲ್ಪಡುವಾಗ ದೇವರ ಯೋಜನೆಗಳು ಮತ್ತು ಉದ್ದೇಶಗಳು **ನೆರವೇರುವವು** (ಸಮಾಪ್ತಿಗೊಳ್ಳುವವು; 11:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). Michael Wilcockನು ದೇವದೂತನ ಮಾತುಗಳನ್ನು ಹೀಗೆ ಸಾರಾಂಶಗೊಳಿಸಿದನು: "ದೇವರ ದಿನಚರಿಯಲ್ಲಿ ಮುಂದಿನ ಘಟನೆಯು ಏಳನೆಯ ತುತೂರಿಯೇ, ಮತ್ತು ಅದು ಅಂತ್ಯದಲ್ಲಿ ಸಂಭವಿಸುವದು."[5] ದೇವರ ವಾಗ್ದಾನಗಳು ಖಚಿತವಾದವುಗಳು ಎಂಬುದನ್ನು ದೇವದೂತನು ಸಾರುತ್ತಿದ್ದಾನೆ. ನ್ಯಾಯವನ್ನು ಒದಗಿಸುವ ಕುರಿತಾದ ರೋಮನ್ ಸಾಮ್ರಾಜ್ಯದ ವೇಳಾಪಟ್ಟಿಯು ದೇವರ ನ್ಯಾಯ ಒದಗಿಸುವ ಕ್ಯಾಲೆಂಡರ್‌ಗೆ ಎರಡನೆಯ ಸ್ಥಾನವನ್ನು ತೆಗೆದುಕೊಳ್ಳುವದು. ದೇವರ ವೈರಿಗಳು ಅತ್ಯಂಥ ಘೋರವಾದದ್ದನ್ನು ಮಾಡಲಿ; ಅವರು ಕರ್ತನ ವಿಧಿಗಳನ್ನು ರದ್ದುಗೊಳಿಸುವದಕ್ಕೆ ಸಾಧ್ಯವಿರಲಿಲ್ಲ. ದೇವರ ವಾಗ್ದಾನಗಳು ಈಗಲೂ ಖಚಿತವಾಗಿವೆ. ದೇವರ ವಾಕ್ಯವು ಎಂದಿಗೂ ಅಳಿದು ಹೋಗುವದಿಲ್ಲ (ಮತ್ತಾಯ 24:35; 1 ಪೇತ್ರ 1:23).

## ಯೋಹಾನನು ಚಿಕ್ಕ ಸುರುಳಿಯನ್ನು ತಿನ್ನುತ್ತಾನೆ (10:8-11)

**8ಅನಂತರ ಪರಲೋಕದಿಂದ ನನಗೆ ಕೇಳಿಸಿದ ಶಬ್ದವು ತಿರಿಗಿ ನನ್ನೊಂದಿಗೆ ಮಾತಾಡಿ - ನೀನು ಹೋಗಿ ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತುಕೊಂಡಿರುವ ದೂತನ ಕೈಯಲ್ಲಿರುವ ಆ ಬಿಚ್ಚಿದ ಸುರುಳಿಯನ್ನು ತೆಗೆದುಕೋ ಎಂದು ಹೇಳಿತು.
9ನಾನು ಆ ದೂತನ ಬಳಿಗೆ ಹೋಗಿ - ಆ ಚಿಕ್ಕ ಸುರುಳಿಯನ್ನು ನನಗೆ ಕೊಡು ಎಂದು ಕೇಳಲು ಅವನು ನನಗೆ - ನೀನು ಅದನ್ನು ತೆಗೆದುಕೊಂಡು ತಿಂದು ಬಿಡು, ಇದು ನಿನ್ನ ಹೊಟ್ಟೆಯನ್ನು ಕಹಿಯಾಗುವಂತೆ ಮಾಡುವದು, ಆದರೆ ನಿನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿರುವದು ಎಂದು ಹೇಳಿದನು.
10ಆಗ ನಾನು ಆ ಚಿಕ್ಕ ಸುರುಳಿಯನ್ನು ಆ ದೂತನ ಕೈಯಿಂದ ತೆಗೆದುಕೊಂಡು ತಿಂದುಬಿಟ್ಟೆನು. ಅದು ನನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿತ್ತು; ಅದನ್ನು ತಿಂದ ಮೇಲೆ ನನ್ನ ಹೊಟ್ಟೆಯು ಕಹಿಯಾಯಿತು.
11ಆ ಮೇಲೆ - ಇನ್ನೂ ನೀನು ಅನೇಕವಾಗಿರುವ ಪ್ರಜೆ ಜನ ಭಾಷೆ ರಾಜ ಇವರ ವಿಷಯದಲ್ಲಿ ಪ್ರವಾದನೆ ಹೇಳಬೇಕೆಂದು ನನಗೆ ತಿಳಿಸಲ್ಪಟ್ಟಿತು.**

ಸಭೆಯು ಕೆಟ್ಟ ಕಾಲಗಳನ್ನು ಎದುರಿಸುವಾಗ, ಅದು ಏನನ್ನು ಮಾಡತಕ್ಕದ್ದು? ಬಚ್ಚಿಟ್ಟುಕೊಳ್ಳಬೇಕೋ? ದೇವರು ಮಧ್ಯಪ್ರವೇಶಿಸುವದನ್ನು ಕಾಯುತ್ತಾ ನಡುಗುತ್ತಿರಬೇಕೋ? ಅದು ಯಾವನಿಗೂ ಬೇಸರವುಂಟು ಮಾಡದ ರೀತಿಯಲ್ಲಿ ತನ್ನ ಸಂದೇಶವನ್ನು ಮೃದುಗೊಳಿಸಿಕೊಳ್ಳಬೇಕೋ? ಸಂಕಷ್ಟಕರ ಸಮಯಗಳಲ್ಲಿ ಸಭೆಯು ಧೈರ್ಯವಾಗಿಯೂ

ಎದೆಗುಂದದೆಯೂ, ಮುಚ್ಚುಮರೆಯಿಲ್ಲದ ಮಾತಾಡುವದಾಗಿಯೂ ಇರತಕ್ಕದ್ದು ಎಂಬುದಾಗಿ ಪ್ರಕಟನೆ 10 ಮತ್ತು 11 ಅಧ್ಯಾಯಗಳು ಘೋಷಿಸುತ್ತವೆ. ಸಭೆಯು ದೇವರ ವಾಕ್ಯದ *ಬೆಲೆಯನ್ನು ಗ್ರಹಿಸಿಕೊಳ್ಳುವ* ಮೂಲಕ (ವಚನಗಳು 1-7) ಮತ್ತು ಬಳಿಕ ಅದನ್ನು *ಸ್ವಂತವಾಗಿಸಿಕೊಳ್ಳುವ* ಮೂಲಕ (ವಚನಗಳು 8-11) ಅಂಥ ಕಠಿಣ ಸವಾಲನ್ನು ಎದುರಿಸಬಲ್ಲದು ಎಂಬುದನ್ನು 10ನೇ ಅಧ್ಯಾಯವು ಒತ್ತಿ ಹೇಳುತ್ತದೆ. ಇವುಗಳೊಳಗೆ ಮೊದಲನೆಯದನ್ನು ನಾವು ಗಮನಿಸಿರುತ್ತೇವೆ; ಈಗ ಎರಡನೆಯದನ್ನು ಗಮನಿಸೋಣ.

**ವಚನ 8.** 10ನೇ ಅಧ್ಯಾಯದ ಮೊದಲ ಏಳು ವಚನಗಳು "ತನ್ನ ಕೈಯಲ್ಲಿ ಬಿಚ್ಚಿದ್ದ ಒಂದು ಚಿಕ್ಕ ಸುರುಳಿ" ಹಿಡಿದುಕೊಂಡಿದ್ದ "ಬಲಿಷ್ಠನಾದ ದೇವದೂತನ" ಕುರಿತು ನಮಗೆ ತಿಳಿಸುತ್ತವೆ (ವಚನಗಳು 1, 2). 8ನೇ ವಚನವು ಕೇಂದ್ರಿತ ಗಮನವನ್ನು ದೇವದೂತನ ಮೇಲಿಂದ ತೆಗೆದು ಯೋಹಾನನ ಮೇಲೆ ಇಡುತ್ತದೆ: **ಅನಂತರ ಪರಲೋಕದಿಂದ ನನಗೆ ಕೇಳಿಸಿದ ಶಬ್ದವು ತಿರಿಗಿ ನನ್ನೊಂದಿಗೆ ಮಾತಾಡಿತು.** ಇದೇ ಶಬ್ದವು ಏಳು ಗುಡುಗುಗಳು ಹೇಳಿದ್ದನ್ನು ಬರೆಯಬಾರದೆಂದು ಯೋಹಾನನಿಗೆ ಅಪ್ಪಣೆ ಕೊಟ್ಟಿತ್ತು (ವಚನಗಳು 3, 4). ಆ ಶಬ್ದವು ಹೀಗೆ ಹೇಳುತ್ತದೆ, **ನೀನು ಹೋಗಿ ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತುಕೊಂಡಿರುವ ದೂತನ ಕೈಯಲ್ಲಿರುವ ಆ ಬಿಚ್ಚಿದ ಸುರುಳಿಯನ್ನು ತೆಗೆದುಕೋ.** ಸ್ಪಷ್ಟವಾಗಿ ಕಾಣಿಸುವ ಪ್ರಕಾರ, ದರ್ಶನದಲ್ಲಿ ಯೋಹಾನನು ಈಗ "ಪರಲೋಕದಲ್ಲಿ" ಇರುವದರ ಬದಲಾಗಿ "ಭೂಮಿಯ ಮೇಲೆ" ಇದ್ದನು (4:1). ಒಂದು ದರ್ಶನದಲ್ಲಿ, ಅಪೊಸ್ತಲನು ಶಾರೀರಿಕವಾಗಿ ಎಲ್ಲಿಯೂ ಸಾಗಿಸಲ್ಪಡದೆಯೇ ಇವೆರಡರಲ್ಲಿ ಯಾವ ಸ್ಥಳದಲ್ಲಾದರೂ ಇರುವದಕ್ಕೆ ಶಕ್ತನಾಗಿದ್ದನು.

ಯೋಹಾನನ ಮೇಲೆ ಏಕಾಏಕಿ ಒಬ್ಬ ಗಮನಿಸುವವನ ಪಾತ್ರದಿಂದ ತೆಗೆದು ಅವನ ಮೇಲೆ ಪಾಲುಗಾರನ ಪಾತ್ರವನ್ನು ಹೇರಲಾಯಿತು. ಆತನಿಗೆ ಆಗ ವಿವಿಧ ಭಾವಗಳು ಅನುಭವವಾಗಿರಬಹುದು: ಆಶ್ಚರ್ಯ, ರೋಮಾಂಚನ, ಬಹುಶಃ ಅಳುಕು ಆಗಿರಬಹುದು. ಆತನಿಗೆ ಆ ರೀತಿ ಅನುಭವವಾಗಿದ್ದರೂ, ಅವುಗಳು ಆತನನ್ನು ಸಂಕೋಚ ಪಡುವಂತೆ ಮಾಡಲಿಲ್ಲ.

**ವಚನ 9.** ಆತನು ಹೀಗೆ ಬರೆಯುತ್ತಾನೆ, **ನಾನು ಆ ದೂತನ ಬಳಿಗೆ ಹೋಗಿ - ಆ ಚಿಕ್ಕ ಸುರುಳಿಯನ್ನು ನನಗೆ ಕೊಡು ಎಂದು ಕೇಳಿದೆನು.** ಆಗ ದೇವದೂತನು ಪ್ರತ್ಯುತ್ತರವಾಗಿ, **ನೀವು ಇದನ್ನು ತೆಗೆದುಕೊಂಡು ತಿಂದು ಬಿಡು** ಎಂದು ಹೇಳಿದನು. ಒಬ್ಬನು ಆರಂಭದಲ್ಲಿ ಹೀಗೆ ಪ್ರತಿಕ್ರಿಯೆಯನ್ನು ನೀಡಬಹುದಾಗಿದೆ, "ನಾವು ಪುಸ್ತಕಗಳನ್ನು ತಿನ್ನುವದಿಲ್ಲವಲ್ಲಾ! ಅವುಗಳನ್ನು ಶೆಲ್ಫುಗಳಲ್ಲಿಯೇ ಇಟ್ಟು ಧೂಳು ತಿನ್ನುವದಕ್ಕೆ ಬಿಡುತ್ತೇವೆ ಮತ್ತು ಯಾವಾಗೋ ಒಮ್ಮೆ ಓದುತ್ತೇವೆ; ಆದರೆ ನಾವು ಅವುಗಳನ್ನು ತಿನ್ನುವದಿಲ್ಲ!" ಹೇಗೂ, ಈ ದಿನಗಳಲ್ಲಿ ಅದೇ ರೀತಿಯ ಮಾತುಗಳನ್ನು ಬಳಸಲಾಗುತ್ತದೆ. ಜನರು ತಾವು ಬಹಳ ಆನಂದಿಸುವಂಥ ಪುಸ್ತಕವನ್ನು "ನುಂಗಿ ಬಿಡುವ" ಮಾತಾಡುತ್ತಾರೆ. Francis Baconನು ಹೀಗೆ ಹೇಳಿದನು, "ಕೆಲವು ಪುಸ್ತಕಗಳನ್ನು ರುಚಿ ನೋಡಬೇಕು, ಇನ್ನು ಕೆಲವು ಪುಸ್ತಕಗಳನ್ನು ನುಂಗಬೇಕು, ಮತ್ತು ಬೇರೆ ಕೆಲವೊಂದನ್ನು ಅಗೆದು ತಿಂದು ಜೀರ್ಣಿಸಿಕೊಳ್ಳಬೇಕಾಗುತ್ತದೆ."[6] ಒಬ್ಬನು ಈ ಹೇಳಿಕೆಗೆ ಒಂದು ಸೇರ್ಪಡೆಯನ್ನು ಮಾಡಬಹುದು: "ಮತ್ತು ಇನ್ನು ಕೆಲವೊಂದನ್ನು ವಿಷವೆಂಬಂತೆ ದೂರವಿರಿಸಬೇಕು."

ಒಂದು "ಸುರುಳಿ" ಯನ್ನು ತಿನ್ನುವದು ಯೋಹಾನನಿಗೆ ಅಪರಿಚಿತವಾದ ಕಾರ್ಯವೇನೂ ಆಗಿರಲಿಲ್ಲ. ಪ್ರವಾದಿಯಾದ ಯೆಹೆಜ್ಕೇಲನಿಗೆ ಸಹ ಹೀಗೆ ಆಜ್ಞಾಪಿಸಲಾಗಿತ್ತು, ". . . ನಿನಗೆ ಸಿಕ್ಕಿದ ಈ ಸುರುಳಿಯನ್ನು ತಿನ್ನು . . . ಈ ಸುರುಳಿಯನ್ನು ತಿಂದು ಹೊಟ್ಟೆ ತುಂಬಿಸಿಕೋ"

(ಯೆಹೆಜ್ಕೇಲ 3:1, 3; ನೋಡಿರಿ ಯೆಹೆಜ್ಕೇಲ 2:8–3:14). ಯೆರೆಮೀಯನು ದೇವರ ವಾಕ್ಯಗಳ ವಿಷಯವಾಗಿ ಮಾತಾಡುವ ವೇಳೆ, ಆತನು ಹೀಗೆ ಹೇಳಿದನು, "ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು, ನಿನ್ನ [ದೇವರ] ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು" (ಯೆರೆಮೀಯ 15:16). ಬೈಬಲ್ ಅನೇಕ ಸಾರಿ ದೇವರ ವಾಕ್ಯವನ್ನು ತಿನ್ನುವಂತ ಆಹಾರಕ್ಕೆ ಹೋಲಿಕೆ ಮಾಡುತ್ತದೆ (ಮತ್ತಾಯ 4:4; 1 ಕೊರಿಂಥ 3:1, 2; ಇಬ್ರಿಯ 5:12–14; 1 ಪೇತ್ರ 2:2).

ಇಬ್ರಿಯ ಯೋಚನೆಯಲ್ಲಿ, ಒಬ್ಬ ವ್ಯಕ್ತಿಯು ಒಂದು ಸುರುಳಿಯನ್ನು (ಪುಸ್ತಕವನ್ನು) ತಿಂದನು ಎಂದು ಹೇಳಿದರೆ, ಆತನು ಅದರಲ್ಲಿನ ಮಾತುಗಳನ್ನು ರುಚಿಸಿದನು, ಅದರ ಉಪದೇಶಗಳನ್ನು ಆಸ್ವಾದಿಸಿದನು, ಮತ್ತು ಅದರ ಸತ್ಯಗಳನ್ನು ತನ್ನೊಳಗೆ ಜೀರ್ಣಿಸಿಕೊಂಡನು ಎಂದರ್ಥವಾಗಿರುತ್ತದೆ. Robert Mulhollandನು ಹೀಗೆ ಬರೆಯುತ್ತಾನೆ, "ಇಲ್ಲಿ ಚಿತ್ರಣವು ಒಬ್ಬನು ದೇವರ ವಾಕ್ಯಗಳನ್ನು ಸಂಪೂರ್ಣ ಹೀರಿಕೊಂಡು ಅದರ ತತ್ವಗಳು ಒಬ್ಬನ ಜೀವಿತದಲ್ಲಿ ಸಕ್ರಿಯವಾಗುವ"[7] ಕುರಿತಾದದ್ದಾಗಿದೆ. ತತ್ಪರಿಣಾಮವಾಗಿ, ಯೋಹಾನನಿಗೆ ಸಂದೇಶವನ್ನು ತನ್ನಲ್ಲಿ ಭಾಗವಾಗಿ ಮಾಡಿಕೊಳ್ಳುವಂತೆ ಆಜ್ಞಾಪಿಸಲಾಗುತ್ತದೆ. ದೇವರ ಸಂದೇಶವನ್ನು ದೇವರ ಸಂದೇಶಕನಿಂದ ಬೇರ್ಪಡಿಸುವದಕ್ಕೆ ಸಾಧ್ಯವಿಲ್ಲ.

ಯೋಹಾನನು ಸುರುಳಿಯನ್ನು ತಿನ್ನುವದಕ್ಕೆ ಸಿದ್ಧನಾಗುತ್ತಿದ್ದ ವೇಳೆ, ದೇವದೂತನು ಅವನಿಗೆ ಒಂದು ಪರಿಣಾಮವಾಗುವದೆಂದು ಎಚ್ಚರಿಸುತ್ತಾನೆ: **ಇದು ನಿನ್ನ ಹೊಟ್ಟೆಯನ್ನು ಕಹಿಯಾಗುವಂತೆ ಮಾಡುವದು, ಆದರೆ ನಿನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿರುವದು.** ದೇವರ ವಾಕ್ಯವನ್ನು ಪ್ರೀತಿಸುವವರಿಗೆ **ಜೇನಿನಂತೆ ಸಿಹಿಯಾಗಿರುವದು** ಎಂಬ ಪದಗುಚ್ಛವನ್ನು ಅರ್ಥಮಾಡಿಕೊಳ್ಳಲು ಸಮಸ್ಯೆಯಿರುವದಿಲ್ಲ. ಕೀರ್ತನೆಗಾರನು ಹೀಗೆ ಹೇಳಿದನು, "ನಿನ್ನ ನುಡಿಗಳು ನನ್ನ ನಾಲಿಗೆಗೆ ಎಷ್ಟೋ ರುಚಿಯಾಗಿವೆ; ಅವು ನನ್ನ ಬಾಯೊಗೆ ಜೇನುತುಪ್ಪಕ್ಕಿಂತಲೂ ಸಿಹಿಯಾಗಿವೆ" (ಕೀರ್ತನೆ 119:103; ನೋಡಿರಿ ಕೀರ್ತನೆ 19:10). ಇನ್ನೊಂದೆಡೆಯಲ್ಲಿ, **ಇದು ನಿನ್ನ ಹೊಟ್ಟೆಯನ್ನು ಕಹಿಯಾಗುವಂತೆ ಮಾಡುವದು** ಎಂಬ ಹೇಳಿಕೆಯು ಕೆಲವರಿಗೆ ವಿಚಿತ್ರವೇನಿಸಬಹುದಾಗಿದೆ - ಆದರೆ ವಾಕ್ಯವನ್ನು ಅನೇಕ ಕಾಲದಿಂದ ಉಪದೇಶ ಮಾಡಿರುವವರಿಗೆ ಸಂದೇಶದ ಕಹಿಯಿಂದ ಕೂಡಿದ ಸಿಹಿಯ ಸ್ವಭಾವವನ್ನು ಅರ್ಥಮಾಡಿಕೊಳ್ಳುವದಕ್ಕೆ ಸಮಸ್ಯೆಯೇನೂ ಇರುವದಿಲ್ಲ. ವಾಕ್ಯವನ್ನು ಬೋಧಿಸುವದು ಮತ್ತು ಉಪದೇಶಿಸುವದು ಕೆಲವರ ಮುಖದಲ್ಲಿ ಮಂದಹಾಸವನ್ನು ಮೂಡಿಸುತ್ತದೆ, ಆದರೆ ಅದು ನಿಮ್ಮ ಕಣ್ಣುಗಳಲ್ಲಿ ನೀರನ್ನು ಸಹ ಬರಮಾಡಬಲ್ಲದು.

ಯೆಹೆಜ್ಕೇಲನು ತನಗೆ ಕೊಡಲ್ಪಟ್ಟ ಸುರುಳಿಯನ್ನು ತಿಂದಾಗ, ಅದು ಆತನ ಬಾಯಲ್ಲಿ "ಜೇನಿನಂತೆ ಸಿಹಿಯಾಗಿತ್ತು" (ಯೆಹೆಜ್ಕೇಲ 3:3); ಆದರೆ ಸುರುಳಿಯಲ್ಲಿ "ಗೋಳು, ಮೂಲುಗು, ಮೊರೆ" ಇವುಗಳಿದ್ದವು (ಯೆಹೆಜ್ಕೇಲ 2:10), ಪ್ರವಾದಿಯು "ಮನಸ್ತಾಪಪಡುವದಕ್ಕೆ" ಹೆಚ್ಚು ಹೊತ್ತು ಬೇಕಾಗಲಿಲ್ಲ (ಯೆಹೆಜ್ಕೇಲ 3:14). ಯೆರೆಮೀಯನು ದೇವರ ವಾಕ್ಯಗಳನ್ನು ತಿಂದಾಗ, ಅವುಗಳು ಆತನ ಹೃದಯಕ್ಕೆ "ಹರ್ಷವೂ ಹೃದಯಾನಂದವೂ" ಆಗಿದ್ದವು (ಯೆರೆಮೀಯ 15:16); ಆದರೆ ಅನಂತರದಲ್ಲಿ ಆತನು ಹೇಳಿದ್ದೇನೆಂದರೆ, "ಯೆಹೋವನ ವಾಕ್ಯವು ನನ್ನನ್ನು ಜನರ ದೂಷಣೆಗೂ ಪರಿಹಾಸಕ್ಕೂ ಗುರಿಮಾಡಿದೆ" ಎಂಬದೆ (ಯೆರೆಮೀಯ 20:8).

ಯೋಹಾನನ ಕಹಿಯಿಂದ ಕೂಡಿದ ಸಿಹಿಯಾದ ಸಂದೇಶದ ವಿಷಯದಲ್ಲಿ ನೋಡುವದಾದರೆ, ಅದರ "ಕಹಿಯಾದ" ಭಾಗವು ಯಾವದನ್ನು ಒಳಗೊಂಡಿತ್ತು: ಅಪೊಸ್ತಲನು ಪಾಪವನ್ನು ಬಯಲುಗೊಳಿಸುವದು ಅಗತ್ಯವಿರುತ್ತದೆ ಎಂಬ ವಾಸ್ತವಾಂಶವೇ (ಪ್ರಕಟನೆ 9:21;

18:3)? ಆತನ ಸಂದೇಶವು ಬಹುಪಾಲು ಭಾಗವು ಪಶ್ಚಾತ್ತಾಪವಿಲ್ಲದವರಿಗೆ ದಂಡನೆಯಾಗುವ ಕುರಿತಾಗಿತ್ತು ಎಂಬ ವಾಸ್ತವಾಂಶ (ಪ್ರಕಟನೆ 19:20; 20:10, 15)? ಬಹಳಮಟ್ಟಿಗೆ, ಎಲ್ಲಾ ಮನುಷ್ಯರೂ ಆತನ ಸಂದೇಶವನ್ನು ತಿರಸ್ಕರಿಸುವರು ಎಂಬ ವಾಸ್ತವಾಂಶ (9:20, 21; 16:11)? ಮಾನವ ಜನಾಂಗವು ಸಂದೇಶಕನನ್ನು ಹಿಂಸಿಸುವ ಮೂಲಕ ಸಂದೇಶಕ್ಕೆ ಪ್ರತಿಕ್ರಿಯೆಯನ್ನು ನೀಡುವರು ಎಂಬ ವಾಸ್ತವಾಂಶ (11:7; 12:17)? ಬಹುಶಃ ಸುರುಳಿಯು ಈ ಎಲ್ಲಾ ಸತ್ಯಗಳನ್ನು ಒಳಗೊಂಡಿರಬಹುದಾಗಿದೆ.

**ವಚನ 10.** ಸುರುಳಿಯನ್ನು ತಿನ್ನುವದರಿಂದ ಏನು ಪರಿಣಾಮವಾಗುತ್ತದೆಂಬುದನ್ನು ತಿಳಿದಿದ್ದು ಯೋಹಾನನನ್ನು ಹಿಂಜರಿಯುವಂತೆ ಮಾಡಲಿಲ್ಲ. ಆತನು **ಆ ಚಿಕ್ಕ ಸುರುಳಿಯನ್ನು ಆ ದೂತನ ಕೈಯಿಂದ ತೆಗೆದುಕೊಂಡು ತಿಂದುಬಿಟ್ಟನು.** ಅದರ ಫಲಿತವು ದೇವದೂತನು ಮುಂತಿಳಿಸಿದ್ದ ರೀತಿಯಲ್ಲಿಯೇ ಆಗಿತ್ತು: **ಅದು ನನ್ನ ಬಾಯಲ್ಲಿ ಜೇನಿನಂತೆ ಸಿಹಿಯಾಗಿತ್ತು; ಅದನ್ನು ತಿಂದ ಮೇಲೆ ನನ್ನ ಹೊಟ್ಟೆಯು ಕಹಿಯಾಯಿತು.**

ಇಂದು ಅನೇಕರು ಕಹಿಯಿಂದಿರುವ ಸಿಹಿ ಸಂದೇಶವನ್ನು ಇಷ್ಟಪಡುವದಿಲ್ಲ. ಯೆಶಾಯನ ದಿನಗಳಲ್ಲಿದ್ದ ಜನರ ರೀತಿಯಲ್ಲಿಯೇ, ಅವರು ಸಂದೇಶಕನಿಗೆ ಹೀಗೆ ಹೇಳುವರು, "ನಯವಾದವುಗಳನ್ನು [ಮಾತ್ರವೇ] ನಮಗೆ ನುಡಿಯಿರಿ" (ಯೆಶಾಯ 30:10; ನೋಡಿರಿ 2 ತಿಮೊಥೆ 4:3). ಹಾಗಿದ್ದರೂ, ದೇವರ ನಂಬಿಗಸ್ತ ಸಂದೇಶಕರಾಗಿರುವವರಿಗೆ ತಾವೇನು ಹೇಳುವರು ಹಾಗೂ ಹೇಳುವದಿಲ್ಲ ಎಂಬುದನ್ನು ಆರಿಸಿಕೊಳ್ಳುವ ಐಷರಾಮತೆ ಇರುವದಿಲ್ಲ. ಅವರು "ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ" ತಿಳಿಸುವದು ಅವಶ್ಯವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 20:27); ಅವರು "ಖಂಡಿಸಬೇಕು" ಮತ್ತು "ಗದರಿಸಬೇಕು" ಮಾತ್ರವಲ್ಲದೆ "ಎಚ್ಚರಿಸಬೇಕು" (2 ತಿಮೊಥೆ 4:2). H. L. Ellisonನು ಹೀಗೆ ಹೇಳಿದನು, "ಸುವಾರ್ತೆಯಲ್ಲಿ ಒಂದು ಕಹಿಯಾದ ಅಂಶವಿದ್ದು ಸುವಾರ್ತೆಯನ್ನೂ ಕೆಡಿಸದೆಯೇ ಆ ಅಂಶವನ್ನು ನಿರ್ಮೂಲಮಾಡುವದಕ್ಕೆ ಸಾಧ್ಯವಿಲ್ಲ."[8] ಮನುಷ್ಯರಲ್ಲಿ ಪಾಪದ ಮನವರಿಕೆಯುಂಟಾಗುವ ತನಕ ಅವರು ಕೃಪೆಗಾಗಿ ಹಂಬಲಿಸುವವರಲ್ಲ. ಅವರಿಗೆ ತಾವು ಕಳೆದುಹೋಗಿದ್ದೇವೆಂಬುದು ಅರ್ಥವಾಗುವ ತನಕ ರಕ್ಷಣೆಯನ್ನು ಅವರು ಹುಡುಕುವವರಲ್ಲ. ಅವರಿಗೆ ನರಕದ ಭಯಾನಕತೆಗಳ ಕುರಿತ ಸತ್ಯವು ತಿಳಿಯುವ ತನಕ ಪರಲೋಕದ ಸಂತೋಷವು ಏನೆಂಬುದನ್ನು ಅವರು ಪೂರ್ಣವಾಗಿ ಅರ್ಥಮಾಡಿಕೊಳ್ಳುವದಿಲ್ಲ.

**ವಚನ 11.** ಯೋಹಾನನಿಗೆ ಅವನ ಹಸಿವೆಯನ್ನು ನೀಗಿಸುವದಕ್ಕೆ ಅಥವಾ ಮಧ್ಯಾಹ್ನದ ತಿಂಡಿಯಂತೆ ತಿನ್ನಬೇಕೆಂದಷ್ಟೆ ಸುರುಳಿಯನ್ನು ತಿನ್ನುವದಕ್ಕೆ ಕೊಡಲಿಲ್ಲ. ಬದಲಾಗಿ, ಸುರುಳಿಯನ್ನು ತಿನ್ನುವದು ಆತನನ್ನು ಮುಂದಿನ ಸೇವೆಗೋಸ್ಕರ ಸಿದ್ಧಗೊಳಿಸುವದಕ್ಕಾಗಿತ್ತು (ನೋಡಿರಿ ಯೆಹೆಜ್ಕೇಲ 3:1, 4). **ಇನ್ನೂ ನೀನು . . . ಪ್ರವಾದನೆ ಹೇಳಬೇಕೆಂದು [ಅವರಿಂದ] ನನಗೆ ತಿಳಿಸಲ್ಪಟ್ಟಿತು. ಅವರಿಂದ** ಎಂಬವರು ಯಾರೆಂಬುದು ಸ್ಪಷ್ಟವಾಗಿಲ್ಲ - ಬಹುಶಃ ದೇವದೂತನ ಜೊತೆಯಲ್ಲಿ ಆ ಧ್ವನಿ, ಅಥವಾ ಬಹುಶಃ ದೇವರು ಹಾಗೂ ಯಜ್ಞದ ಕುರಿಯಾದಾತನು ಆಗಿರಬಹುದಾಗಿದೆ.

"ಅವರು" ಯಾರೇ ಆಗಿದ್ದರೂ ಸರಿಯೇ, ಅವರು ಯೋಹಾನನಿಗೆ ನೀಡಿದ ಕರೆಯು ಇನ್ನೂ **ಅನೇಕವಾಗಿರುವ ಪ್ರಜೆ ಜನ ಭಾಷೆ ರಾಜ ಇವರ ವಿಷಯದಲ್ಲಿ** ಪ್ರವಾದನೆ ತಿಳಿಸಬೇಕೆಂಬುದಾಗಿತ್ತು. **ವಿಷಯದಲ್ಲಿ** ಎಂಬದನ್ನು ಅನುವಾದಿಸಿರುವ ಗ್ರೀಕ್ ಉಪಸರ್ಗದ ಅರ್ಥಕ್ಕೆ ಸಂಬಂಧಿಸಿದಂತೆ ಗಮನಾರ್ಹವಾದ ಪ್ರಮಾಣದಲ್ಲಿ ಚರ್ಚೆಯು ಮಾಡಲ್ಪಟ್ಟಿರುತ್ತದೆ. ಇಲ್ಲಿ ಬಳಸಲಾಗಿರುವ ಪದವು ἐπί (*epi*), ಅದರ ಮೂಲಭೂತವಾದ ಅರ್ಥವು "ಮೇಲೆ"

ಎಂದಾಗಿರುತ್ತದೆ. ಕೆಲವರ ಆ ಪದವು "ಮುಂದೆ" (KJV) ಎಂದು ಅನುವಾದಿಸಲ್ಪಡಬೇಕು ಎಂದು ವಾದಿಸುತ್ತಾರೆ, ಆದರೆ ಉಪಸರ್ಗದ ನಂತರ ಬರುವ ಕರ್ಮಪದವು ಬಹುಶಃ ಇಲ್ಲಿ ಅರ್ಥವು "ಮೇಲೆ, ಕುರಿತು, ವಿಷಯವಾಗಿ" ಎಂದಾಗಿದೆ ಎಂಬುದನ್ನು ಸೂಚಿಸುತ್ತದೆ.

ಈ ಅಧ್ಯಾಯದೊಳಗೆ ಈ ಮುಂಚೆ ಗಮನಿಸಿರುವ ಹಾಗೆ, **ಪ್ರಜೆ ಜನ ಭಾಷೆ ರಾಜ ಇವರ** ಎಂಬುದಾಗಿ ಪಟ್ಟಿಯನ್ನು ಮಾಡುವದು ಪ್ರಕಟನೆ ಪುಸ್ತಕದೊಳಗೆ ಬೇರೊಂದು ಕಡೆಯಲ್ಲಿ "ಎಲ್ಲೆಡೆಯೂ ಇರುವ ಸಕಲ ಮನುಷ್ಯರು" ಎಂಬುದನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ನೋಡಿರಿ 7:9; 11:9; 17:15). ಇಲ್ಲೊಂದು ಮಹತ್ವಪೂರ್ಣವಾದ ವ್ಯತ್ಯಾಸವು ಕಂಡು ಬರುತ್ತದೆ: ಸಾಮಾನ್ಯವಾಗಿ ಕಂಡು ಬರುತ್ತಿದ್ದ "ಕುಲಗಳು" ಎಂಬುದರ ಬದಲಾಗಿ **ಅರಸರು** ಎಂದು ಬಳಸಲ್ಪಟ್ಟಿದೆ. ಈ ವ್ಯಾತ್ಯಾಸವು ಪ್ರಕಟನೆ ಪುಸ್ತಕದ ಉಳಿದ ಅರ್ಧಭಾಗದಲ್ಲಿ ಅರಸರ ಕುರಿತು ಪ್ರಸ್ತಾಪಿಸಲ್ಪಡುವದನ್ನು ಪ್ರತಿಬಿಂಬಿಸುತ್ತಿರಬಹುದಾಗಿದೆ (ನೋಡಿರಿ ಅಧ್ಯಾಯ 17).

ಯೋಹಾನನಿಗೆ **ಇನ್ನೂ ಪ್ರವಾದನೆ ಹೇಳಬೇಕೆಂದು** ಏಕೆ ಹೇಳಲಾಯಿತು? ಈ ಮಾತುಗಳು ಯೋಹಾನನಿಗಾಗಿ ಹೇಗೋ ಹಾಗೆಯೇ ಆತನ ವಾಚಕರಿಗೆ ಸಹ ಪ್ರಕಟನೆ ಪುಸ್ತಕವನ್ನು ಬರೆಯುವಂತೆ ಆತನು ದೇವರಿಂದ ಆದೇಶಿಸಲ್ಪಟ್ಟಿದ್ದಾನೆಂಬದನ್ನು ಪುನರ್ದೃಢೀಕರಿಸುವ ಉದ್ದೇಶಕ್ಕಾಗಿ ಆಗಿರುತ್ತವೆಂದು ಕೆಲವರು ಯೋಚಿಸುತ್ತಾರೆ. ಬಹುಶಃ ಕರೆಯನ್ನು ನೀಡಿದ್ದರ ಉದ್ದೇಶವು ಈ ಕೆಲಸವನ್ನು ಪೂರ್ತಿಗೊಳಿಸುವಂತೆ ಆತನನ್ನು ಪ್ರೋತ್ಸಾಹಗೊಳಿಸುವದಾಗಿತ್ತು. ಯೋಹಾನನು ಪ್ರಕಟನೆ ಪುಸ್ತಕದಲ್ಲಿ ಅರ್ಧ ದಾರಿಯ ವರೆಗೆ ಬಂದಿದ್ದನು, ಆದರೆ ಇನ್ನೂ ಬಹಳಷ್ಟು ಬರಲಿತ್ತು. ಪುಸ್ತಕ ಕಡೇ ಭಾಗವು ಪ್ರಜೆಗಳು ಮತ್ತು ಜನಾಂಗಗಳು ಮತ್ತು ಭಾಷೆಗಳು ಹಾಗೂ ರಾಜರ ವಿಷಯದಲ್ಲಿ ಬಹಳಷ್ಟನ್ನು ಹೇಳುವದಾಗಿರುತ್ತದೆ.

ಬಹುಶಃ ಪ್ರೋತ್ಸಾಹವು ಹೆಚ್ಚು ಸಾಮಾನ್ಯವಾಗಿ ಹೇಳುವ ಮಾತಾಗಿತ್ತು. ಯೋಹಾನನು ಆ ರೀತಿಯಲ್ಲಿ ಪತ್ಮೋಸ್ ದ್ವೀಪದಲ್ಲಿ ಬೇರ್ಪಡಿಸಲ್ಪಟ್ಟವನಾಗಿರುವಾಗ, ಬಹುಶಃ ಅಪೊಸ್ತಲನು ತನ್ನ ಸಕ್ರಿಯವಾದ ವರ್ಷಗಳು ಮುಗಿದು ಹೋದವೇನೋ ಎಂದು ಯೋಚಿಸಿಕೊಂಡಿರಬಹುದಾಗಿದೆ. ಆತನು ಪ್ರಕಟನೆ ಪುಸ್ತಕವನ್ನು ಬರೆದು ಮುಗಿಸಿದ ಬಳಿಕ ಸಹ, ಆತನಿಗೆ ಮಾಡುವದಕ್ಕಾಗಿ ಕೆಲಸವಿರುವದು ಎಂಬದನ್ನು ತಿಳಿದುಕೊಳ್ಳುವದು ಆತನಿಗೆ ಅಗತ್ಯವಿತ್ತು. ಕ್ರಮೇಣದಲ್ಲಿ, ಆತನು ಪತ್ಮೋಸ್ ದ್ವೀಪದಿಂದ ಬಿಡುಗಡೆಗೊಳಿಸಲ್ಪಟ್ಟು ತನ್ನ ಸಾಮಾನ್ಯ ಚಟುವಟಿಕೆಗಳನ್ನು ಮುಂದುವರೆಸಲಿದ್ದನು.

ಯೋಹಾನನು ಪತ್ಮೋಸ್ ದ್ವೀಪದಿಂದ ಬಿಡುಗಡೆಗೊಳಿಸಲ್ಪಟ್ಟ ಮೇಲೆ ಮಾಡಿದ ಕೆಲಸದ ವಿಷಯದಲ್ಲಿ ಸಾಕಷ್ಟು ಊಹೆಯು ಸಂಭವಿಸುತ್ತದೆ. ಆತನು ಎಫೆಸ ಪಟ್ಟಣದಲ್ಲಿ ಯುವ ಸುವಾರ್ತಿಕರಿಗೋಸ್ಕರ ಒಂದು ಶಾಲೆಯನ್ನು ನಡಿಸಿದನು ಎಂದು ಕೆಲವರು ನಂಬಿದರೆ, ಇನ್ನು ಕೆಲವರು ಆತನು ಪ್ರಯಾಣಿಸುತ್ತಿದ್ದನೆಂದು ನಂಬುತ್ತಾರೆ. ಒಂದು ಬಲವಾದ, ಪ್ರೇರಿತವಲ್ಲದ ಸಂಪ್ರದಾಯವು ಆತನ ಕೊನೆಯ ವರ್ಷಗಳು ಎಫೆಸದಲ್ಲಿ ಕಳೆಯಲ್ಪಟ್ಟವು ಎಂದು ತಿಳಿಸುತ್ತದೆ, ಆದರೆ ಅದನ್ನು ಹೊರತು ಪಡಿಸಿದರೆ ಆತನು ಕೊನೆಯ ದಿನದಲ್ಲಿ ಮಾಡಿದ ಕೆಲಸದ ವಿಷಯದಲ್ಲಿ ಒಬ್ಬನು ಊಹೆಯನ್ನು ಮಾತ್ರವೇ ಮಾಡುವದಕ್ಕೆ ಸಾಧ್ಯವಿರುತ್ತದೆ.

ಯೋಹಾನನಿಗೆ ಈ ಅಪ್ಪಣೆಯನ್ನು ಕೊಟ್ಟಿದ್ದಕ್ಕೆ ಕಾರಣವು ಏನೇ ಆಗಿದ್ದರೂ ಸರಿಯೇ, ಆತನ ಮುಂದೆ ಕಾದಿದ್ದ ಕೆಲಸವು ಐಚ್ಛಿಕವಾಗಿರಲಿಲ್ಲ. 11ನೇ ವಚನದಲ್ಲಿ **ಬೇಕು** ಎಂಬ ಪದವು δεῖ (*dei*) ಎಂಬುದರಿಂದ ಅನುವಾದಿಸಲ್ಪಟ್ಟಿದ್ದು, ಅದು "ಒಂದು ನೈತಿಕ ಅವಶ್ಯಕತೆ" ಎಂಬುದನ್ನು ಸೂಚಿಸುತ್ತದೆ. ಆತನು ಪುನಃ "ಪ್ರಜೆ ಜನ ಭಾಷೆ ರಾಜ ಇವರ ವಿಷಯದಲ್ಲಿ

ಪ್ರವಾದನೆ" ತಿಳಿಸಲೇ *ಬೇಕಾಗಿತ್ತು*. ಆತನ ಸೇವೆಯು ಅವನಿಗೆ ಸಂತೋಷವನ್ನು ಕೊಡುವದೆಂದು ಅಥವಾ ಸಾರ್ಥಕತೆಯ ಅನುಭವವನ್ನು ಕೊಡುವದು ಎಂದು ಆತನಿಗೆ ಹೇಳಲ್ಪಡಲಿಲ್ಲ, ಆದರೆ ಅದು *ಅವಶ್ಯವಾಗಿದೆ* ಎಂದು ಹೇಳಲ್ಪಟ್ಟಿತು. ಏನೇ ಬೆಲೆಯನ್ನು ತೆತ್ತಬೇಕಾದರೂ ಸರಿಯೇ ವಾಕ್ಯವನ್ನು ಸಾರುವದಕ್ಕೆ ಮನಸ್ಸುಳ್ಳವರಾಗಿರುವ ಯೋಹಾನನಂತಹ ಮನುಷ್ಯರಿಗಾಗಿ ದೇವರಿಗೆ ಸ್ತೋತ್ರವಾಗಲಿ.

# ಅನ್ವಯಿಸುವಿಕೆ

## ಚಿಕ್ಕ ಸುರುಳಿ (ಅಧ್ಯಾಯ 10)

ಈ ಮುಂಚೆ ಗಮನಿಸಿರುವ ಪ್ರಕಾರವೇ, 10ನೇ ಅಧ್ಯಾಯವು ಎರಡು ಪ್ರಮುಖ ಅಂಶಗಳನ್ನು ಹೊಂದಿದೆ: (1) ಸಂದೇಶವನ್ನು ಶ್ಲಾಘಿಸುವದು ಮತ್ತು (2) ಸಂದೇಶವನ್ನು ಸ್ವಂತಮಾಡಿಕೊಳ್ಳುವದು. ಅಧ್ಯಾಯವನ್ನು ವಿಭಾಗಿಸಬಹುದಾದ ಇನ್ನೊಂದು ವಿಧವೆಂದರೆ ಹೀಗಿರುತ್ತದೆ: (1) ಸಂದೇಶದ ಗುಣಸ್ವಭಾವ ಮತ್ತು (2) ಸಂದೇಶದ ಬೇಡಿಕೆಗಳು.

John Risseನು ಪ್ರಕಾಶನಗೊಳಿಸದಿರುವ "Church of Prophets and Martyrs" ಎಂಬ ಶಿರ್ಷೀಕೆಯಿರುವ ಪ್ರಸಂಗದಲ್ಲಿ, 10ನೇ ಅಧ್ಯಾಯವನ್ನು ದೇವದೂತನ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾನೆ: (1) ದೇವದೂತನ ಬಣ್ಣನೆ (ವಚನಗಳು 1-4), (2) ದೇವದೂತನ ಘೋಷಣೆ (ವಚನಗಳು 5-7), ಮತ್ತು (3) ದೇವದೂತನ ನಿರ್ದೇಶನಗಳು (ವಚನಗಳು 8-11).

10ನೇ ಅಧ್ಯಾಯವು ಲೇಖಕರನ್ನು ಮೋಡಿಗೊಳಿಸುತ್ತದೆ. ಈ ವಾಕ್ಯಭಾಗದ ಮೇಲಿನ ಪಾಠಗಳಿಗಾಗಿ ಸಂಭಾವ್ಯವಾದ ಶಿರ್ಷೀಕೆಗಳು ಹೀಗಿರುತ್ತವೆ: "ನೆಲೆಗೊಳ್ಳುವಂಥ ವಾಕ್ಯ,"[9] "ಮುಗಿದುಹೋದ ಮರ್ಮ,"[10] "ಕರುಣೆಯ ಮರ್ಮ,"[11] "ವಿಮೋಚನೆಯ ಸುವಾರ್ತೆ,"[12] ಮತ್ತು "ಮುಗಿಲುಬಿಲ್ಲು ದೇವದೂತನು."[13] ಇತರ ಸಂಭಾವ್ಯ ಶಿರ್ಷೀಕೆಗಳಲ್ಲಿ ಇವುಗಳು ಸೇರಿರುತ್ತವೆ "ದೇವದೂತನು ಮತ್ತು ಚಿಕ್ಕ ಸುರುಳಿ," "ಒಬ್ಬ ದೊಡ್ಡ ದೇವದೂತನು ಮತ್ತು ಒಂದು ಚಿಕ್ಕ ಸುರುಳಿ," ಮತ್ತು "ಒಂದು ಚಿಕ್ಕ ಸುರುಳಿಯು ತೆರೆಯಲ್ಪಡುತ್ತದೆ."

## ದೇವರ ಸತ್ಯ (10:1-7)

ಈ ಸುರುಳಿಯು ಬೇರೆ ಏನೇ ಆಗಿದ್ದರೂ ಸರಿಯೇ, ಅದು ದೇವರ ಸಂದೇಶವಾಗಿತ್ತು ಮತ್ತು ಹೀಗೆ ಆತನ ಬಾಯಿಂದ ಹೊರಡುವ ಎಲ್ಲಾ ಮಾತುಗಳ ರೀತಿಯಲ್ಲಿಯೇ ಗುಣಸ್ವಭಾವಗಳನ್ನು ವಹಿಸಿಕೊಂಡಿತು. ಈ ಸಂದೇಶವು ಭವ್ಯವಾಗಿತ್ತು, ಜಾಗತಿಕವಾಗಿತ್ತು, ಸಂಕ್ಷೇಪ ಹಾಗೂ ಮಾರ್ಪಾಟಾಗದ್ದು ಆಗಿತ್ತು. ಆದದರಿಂದ, ಯೋಹಾನನು ಅದನ್ನು ಅರ್ಥೈಸಿಕೊಂಡು, ಪ್ರಸಂಶಿಸಿ, ಅಂಗೀಕರಿಸಿಕೊಳ್ಳಬೇಕಿತ್ತು ಮತ್ತು ಒಪ್ಪಿಕೊಳ್ಳಬೇಕಾಗಿತ್ತು - ಅದೇ ರೀತಿಯಲ್ಲಿಯೇ ಇಂದು ನಾವು ಸಹ ದೇವರ ವಾಕ್ಯವಾದ ಬೈಬಲಿಗೆ ಪ್ರತಿಕ್ರಿಯೆಯನ್ನು ತೋರಬೇಕಾಗಿರುತ್ತದೆ.

## ನಮ್ಮ ದೇವದೂತರ ಪ್ರತಿಮೆಗಳು (10:1)

ಇಂದು ಅನೇಕ ಜನರಿಗೆ ದೇವದೂತರು ಒಂದು ಗೀಳು ಆಗಿ ಬಿಟ್ಟಿದ್ದಾರೆ. ದೇವದೂತರ ಚಿತ್ರಗಳು ಹಾಗೂ ಇತರ ವಿಧವಾದ ಪ್ರತಿಕೃತಿಗಳು ಅನೇಕ ಒಳಾಂಗಣ ಅಲಂಕರಣದ ಒಂದು ಭಾಗವಾಗಿರುತ್ತವೆ. ಹೇಗೂ, ಈ ವಾಣಿಜ್ಯ ಉತ್ಪನ್ನಗಳಲ್ಲಿ ಯಾವದೂ ಮೇಘವನ್ನು

ಧರಿಸಿಕೊಂಡು, ಮುಗಿಲುಬಿಲ್ಲಿನ ಕಿರೀಟ, ಪ್ರಕಾಶಿಸುವ ಮುಖ ಹಾಗೂ ಉರಿಯುವ ಪಾದಗಳನ್ನು ಹೊಂದಿದ್ದ ಪ್ರಕಟನೆ 10ನೇ ಅಧ್ಯಾಯದಲ್ಲಿನ ಜೀವಿಯನ್ನು ಹೋಲುವದೇ ಇಲ್ಲ. Eugene Petersonನು ಗಮನಕ್ಕೆ ತರುವದೇನೆಂದರೆ ಪ್ರಕಟನೆ ಪುಸ್ತಕದ ದೇವದೂತರು "Rubens ಎಣ್ಣೆಗಳ ದುಂಡು ದುಂಡಾದ ಮನದನ್ನರು ಅಥವಾ ಕ್ರಿಸ್‌ಮಸ್ ನಾಟಕಗಳಲ್ಲಿ ಕಿಲಕಿಲನೆ ನಗುತ್ತಾ, ಥಳಕು ಬಳಕಿನ ಹುಡುಗಿಯರ ರೀತಿಯಲ್ಲಿ ಆಗಿರುವದಿಲ್ಲ, ಆದರೆ ನಿಜವಾದ ದೇವದೂತರು, ಅಂತ್ಯಕಾಲಿಕ ದೇವದೂತರು - ವಿಶಾಲ, ಅಗ್ನಿಮಯ, ಸಮುದ್ರದಲ್ಲಿ ದಾಪುಗಾಲಿಡುವ ಜೀವಿಗಳಾಗಿದ್ದ ಮೂಗಿನ ಹೊಳ್ಳೆಗಳಲ್ಲಿ ನರಕವನ್ನೂ ಅವರ ಕಣ್ಣುಗಳಲ್ಲಿ ಪರಲೋಕವನ್ನು ಹೊಂದಿರುವವರು."[14] Michael Wilcockನು ಪ್ರಕಟನೆ ಪುಸ್ತಕವು "ದೇವದೂತರು ಕಿನ್ನರಿಗಳನ್ನು ನಿರುತ್ಸಾಹದಿಂದ ಬಾರಿಸುವ ಜೀವಿಗಳಾಗಿದ್ದಾರೆಂಬದಾಗಿ ಇರಬಹುದಾದ ಯಾವದೇ ತೇಲಾಡುವ ವಿಚಾರವನ್ನು ಒಂದೇ ಬಾರಿಗೆ ಶಾಶ್ವತವಾಗಿ ನಿರ್ಮೂಲನ ಮಾಡತಕ್ಕದ್ದು."[15] ಎಂದು ಹೇಳುತ್ತಾನೆ.

## ಚಿಕ್ಕ ಸುರುಳಿಯನ್ನು ತಿನ್ನುವದು (10:8-11)

10:8-11ರ ಮೇಲಿನ ಒಂದು ಪಾಠಕ್ಕಾಗಿ ಸಂಭಾವ್ಯ ಶಿರ್ಷಿಕೆಗಳು ಹೀಗಿರುತ್ತವೆ: "ಒಂದು ಕಹಿಯಾದ ಸಿಹಿ ಸಂದೇಶ," "ದೇವರ ಸಂದೇಶಕನಾಗಿರುವದರ ಸಂತೋಷ ಮತ್ತು ದುಃಖ," ಮತ್ತು "ಎಂದಿಗೂ ಅಂತ್ಯಗೊಳ್ಳದ ಒಂದು ಕೆಲಸ."

## ದೇವರ ವಾಕ್ಯವನ್ನು ಸೇವಿಸುವದು (10:8-11)

ಇಂದು ಸಭೆಗೆ ಇರುವಂಥ ಅತ್ಯಂಥ ದೊಡ್ಡ ಅಗತ್ಯತೆಯೆಂದರೆ ದೇವರ ವಾಕ್ಯವನ್ನು ಕ್ರೈಸ್ತರು ತಮ್ಮ ಜೀವಿತದ ಅವಿಭಾಜ್ಯ ಅಂಗವಾಗಿ ಮಾಡಿಕೊಳ್ಳುವದೇ. ಈ ಕೆಲಸವನ್ನು ಯಾವಾಗಲಾದರೂ ಒಮ್ಮೆ ವಾಕ್ಯವನ್ನು ರುಚಿಸುವದರಿಂದಾಗಲಿ ಅಥವಾ ವಾರಕ್ಕೊಮ್ಮೆ ಒಂದು ಚೂರು ತಿನ್ನುವದರಿಂದ ಸಾಧಿಸಲು ಸಾಧ್ಯವಿಲ್ಲ. ನಾವು ವಾಕ್ಯವನ್ನು "ತಿಂದು" ಬಿಡಬೇಕು. ಅದು ನಮ್ಮ ಮನಸ್ಸುಗಳಲ್ಲಿ ಒಂದು ಭಾಗವಾಗಿ ಸೇರಿಕೊಳ್ಳುವ ತನಕ ಅದನ್ನು ಓದಬೇಕು. ಅದು ನಮ್ಮ ಹೃದಯದ ಒಂದು ಭಾಗವಾಗುವ ತನಕ ಅದನ್ನು ಅಧ್ಯಯನ ಮಾಡಬೇಕು. ಅದು ನಮ್ಮ ಆತ್ಮಗಳಲ್ಲಿ ಒಂದು ಭಾಗವಾಗುವ ತನಕ ಅದನ್ನು ಆಲೋಚಿಸಿಕೊಳ್ಳುತ್ತಲೇ ಇರಬೇಕು. ಅದು ನಮ್ಮ ಜೀವಿತದಲ್ಲಿ ಒಂದು ಭಾಗವಾಗುವ ತನಕ ಅದಕ್ಕೆ ವಿಧೇಯರಾಗಬೇಕು. ಆಗ, ಮತ್ತು ಆಗ ಮಾತ್ರವೇ, "ಕ್ರಿಸ್ತನ ವಾಕ್ಯವು [ನಮ್ಮಲ್ಲಿ] ಸಮೃದ್ಧಿಯಾಗಿ ವಾಸಿಸುವದು" (ಕೊಲೊಸ್ಸೆ 3:16).

ನಾವು ಸಿಹಿಯ ಜೊತೆಯಲ್ಲಿ ಕಹಿಯನ್ನು ಸಹ ಸ್ವೀಕರಿಸಿಕೊಳ್ಳಲು ಮನಸ್ಸುಳ್ಳವರಾಗಿದ್ದರೆ ಮಾತ್ರವೇ ಈ ಗುರಿಯನ್ನು ಸಾಧಿಸಬಹುದಾಗಿದೆ. ದೇವರು ಸಿಹಿಯನ್ನು ನುಂಗಿ ಬಿಟ್ಟು ಕಹಿಯಾದದ್ದನ್ನು ಉಗುಳಿ ಬಿಡುವ ಆಯ್ಕೆಯನ್ನು ಯಾರಿಗೂ ಕೊಟ್ಟಿರುವದಿಲ್ಲ. ಆತನನ್ನು ಮೆಚ್ಚಿಸಬೇಕಾದರೆ, "ಅದನ್ನು ಪೂರ್ತಿ ತಿನ್ನಬೇಕು," ಅದನ್ನು ಪೂರ್ತಿಯಾಗಿ ಅಂಗೀಕರಿಸಿಕೊಳ್ಳಬೇಕು, ಮತ್ತು ಅದಕ್ಕೆ ಪೂರ್ತಿಯಾಗಿ ವಿಧೇಯರಾಗಬೇಕು.

## ಜೇನಿನಂತೆ ಸಿಹಿ (10:10)

ಯೋಹಾನನು ಚಿಕ್ಕ ಸುರುಳಿಯನ್ನು ತಿನ್ನುವದಕ್ಕಾರಂಭಿಸಿದಾಗ, ಅದು "ಜೇನಿನಂತೆ ಸಿಹಿಯಾಗಿತ್ತು" (10:10) ಎಂದು ಕಂಡುಕೊಳ್ಳುತ್ತಾನೆ. ಈ ಚಿತ್ರಣವು ಕೀರ್ತನೆಗಾರನು ಯೆಹೋವನ ಧರ್ಮಶಾಸ್ತ್ರವನ್ನು ಬಣ್ಣಿಸುವ ರೀತಿಯನ್ನು ಹೋಲುತ್ತದೆ, ಅದು "ಅವು

ಜೇನಿಗಿಂತಲೂ ಶೋಧಿಸಿದ ಜೇನು ತುಪ್ಪಕ್ಕಿಂತಲೂ ಸಿಹಿಯಾಗಿವೆ" ಎಂದು ಹೇಳುತ್ತದೆ (ಕೀರ್ತನೆ 19:10; ನೋಡಿರಿ ಕೀರ್ತನೆ 119:103). ಯೋಹಾನನ ಚಿಕ್ಕ ಸುರುಳಿಯ ಸಿಹಿತನದ ವಿಷಯದಲ್ಲಿ William Barclayನು ಈ ಸಂಗತಿಯನ್ನು ಗಮನಕ್ಕೆ ತರುತ್ತಾನೆ:

> ಈ ಮಾತುಗಳ ಹಿಂದೆ ಒಂದು ಅಹ್ಲಾದಕರವಾದ ಯೆಹೂದಿ ಶೈಕ್ಷಣಿಕ ಪದ್ಧತಿಯೊಂದಿರಬಹುದೆಂದರಲ್ಲಿ ಸಂಶಯವಿಲ್ಲ. ಯೆಹೂದಿ ಬಾಲಕನು ಅಕ್ಷರಮಾಲೆಗಳನ್ನು ಕಲಿಯುವ ವೇಳೆ, ಅದು ಸ್ಲೇಟು ಹಲಿಗೆಯ ಮೇಲೆ ಹಿಟ್ಟು ಹಾಗೂ ಜೇನಿನ ಮಿಶ್ರಣ ಮಾಡಿ ಬರೆಯಲ್ಪಟ್ಟಿರುತ್ತಿದ್ದ ಅಕ್ಷರವಾಗಿರುತ್ತಿತ್ತು. ಅವನಿಗೆ ಅಕ್ಷರಗಳಾವವು ಮತ್ತು ಅವುಗಳ ಉಚ್ಛಾರಣೆಯ ಹೇಗೆಂಬುದನ್ನು ತಿಳಿಸಲಾಗುತ್ತಿತ್ತು. ಮೂಲ ಉಪದೇಶವು ಕೊಡಲ್ಪಟ್ಟ ಬಳಿಕ, ಶಿಕ್ಷಕನು ಅಕ್ಷರವನ್ನು ತೋರಿಸಿ, "ಅದು ಏನು ಮತ್ತು ಅದರ ಉಚ್ಛಾರಣೆ ಹೇಗೆ?" ಎಂದು ಕೇಳುತ್ತಿದ್ದನು. ಬಾಲಕನು ಸರಿಯಾದ ಉತ್ತರವನ್ನು ಕೊಡುವದಕ್ಕೆ ಶಕ್ತನಾದಲ್ಲಿ ಅದಕ್ಕೆ ಬಹುಮಾನವಾಗಿ ಸ್ಲೇಟು ಹಲಿಗೆಯ ಮೇಲಿನ ಅಕ್ಷರವನ್ನು ನೆಕ್ಕುವಂತೆ ಅನುಮತಿಸಲಾಗುತ್ತಿತ್ತು![16]

## ಇನ್ನೂ ಪ್ರವಾದನೆ ತಿಳಿಸು (10:11)

ಪ್ರವಾದಿಸುವ ಎಂಬ ಆದೇಶವು ಯೋಹಾನನಿಗೆ ಹೇಳಿದ್ದಾಗಿತ್ತು, ಆದರೆ ಅದರ ಅನ್ವಯಿಕೆಯನ್ನು ಪ್ರತಿಯೊಬ್ಬ ಕ್ರೈಸ್ತನಿಗೂ ಮಾಡಬಹುದಾಗಿದೆ. ವಾಕ್ಯವನ್ನು ಎಲ್ಲಾ ಜನರಿಗೂ ಕೊಂಡೊಯ್ಯುವ ನೈತಿಕ ಹೊಣೆಗಾರಿಕೆಯನ್ನು ಕರ್ತನು ನಮ್ಮೊಬ್ಬೊಬ್ಬರ ಮೇಲೆಯೂ ಇಟ್ಟಿರುವವನಾಗಿದ್ದಾನೆ (ಮತ್ತಾಯ 28:19; ಮಾರ್ಕ 16:15; ಲೂಕ 24:47). 10ನೇ ಅಧ್ಯಾಯವು ವಾಕ್ಯದ ಮಹತ್ವವನ್ನು ಅರಿತುಕೊಳ್ಳುವಂತೆ, ವಾಕ್ಯವನ್ನು ಸ್ವಂತಮಾಡಿಕೊಳ್ಳುವಂತೆ, ಮತ್ತು ಬೇರೆಯವರಿಗೆ ವಾಕ್ಯವನ್ನು ಹಂಚುವಂತೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಕರೆ ನೀಡುತ್ತದೆ.

ಯಾರೋ ಒಬ್ಬರು ಮನುಷ್ಯನೊಬ್ಬನ ಜೀವಿತದಲ್ಲಿ ಎರಡು ಪ್ರಾಮುಖ್ಯವಾದ ದಿನಗಳಿರುತ್ತವೆಂದು ಹೇಳಿರುತ್ತಾರೆ: ಮೊದನೆಯದ್ದು, ಆತನು ಹುಟ್ಟಿದ ದಿನ, ಮತ್ತು ಎರಡನೆಯದ್ದು, ತಾನು *ಏಕೆ* ಹುಟ್ಟಿದನು ಎಂಬುದನ್ನು ತಿಳಿದುಕೊಳ್ಳುವ ದಿನ.[17] ನಾವು ಜೀವಿಸುವ ಪ್ರಾಥಮಿಕ ಉದ್ದೇಶವು ದೇವರನ್ನು ಮಹಿಮೆ ಪಡಿಸುವದೇ ಎಂಬುದಾಗಿ ಬೈಬಲ್ ನಮಗೆ ಕಲಿಸುತ್ತದೆ (ಮತ್ತಾಯ 5:16; 1 ಕೊರಿಂಥ 6:20; 1 ಪೇತ್ರ 2:12; 4:16) – ಅದನ್ನು ಮಾಡುವದಕ್ಕೆ ಇರುವಂಥ ಒಂದು ಪ್ರಾಮುಖ್ಯವಾದ ದಾರಿಯೆಂದರೆ ಆತನ ವಾಕ್ಯದ ಕುರಿತು ಬೇರೆಯವರಿಗೆ ಹೇಳುವದೇ.

---

### ಅಡಿಟಿಪ್ಪಣಿಗಳು

[1]Leon Morris, *Revelation*, rev. ed., The Tyndale New Testament Commentary, ed. Leon Morris (Grand Rapids, Mich.: Wm. B. Eerdmans Publishing Co., 1987), 134. [2]Ibid., 135. [3]William Hendriksen, *More Than Conquerors* (Grand Rapids, Mich.: Baker Book House, 1954), 150. [4]Burton Coffman, *Commentary on Revelation* (Austin, Tex.: Firm Foundation Publishing House, 1979), 225. [5]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 101. [6]Francis Bacon, *Of Studies*, quoted in John Bartlett, *Bartlett's Familiar Quotations*, ed. Justin Kaplan (Boston: Little, Brown and Co., 1992), 160. Bacon (1561–1626) was an English

essayist, lawyer, statesman, and philosopher. [7]M. Robert Mulholland, Jr., *Revelation: Holy Living in an Unholy World*, The Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 201. [8]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 63. [9]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 48. [10]Merrill C. Tenney, *The Book of Revelation,* Proclaiming the New Testament (Grand Rapids, Mich.: Baker Book House, 1963), 51.

[11]D. T. Niles, *As Seeing the Invisible: A Study of the Book of Revelation* (New York: Harper & Brothers Publishers, 1961), 149. [12]Ibid. [13]R. C. H. Lenski, *Interpretation of St. John's Revelation* (Columbus, Ohio: Wartburg Press, 1951), 310. [14]Eugene H. Peterson, *Reversed Thunder* (San Francisco: HarperCollins Publishers, 1988), 104. Peter Paul Rubens (1577–1640) was the most famous Flemish painter of his day. Many of his better-known paintings have a religious theme. [15]Wilcock, 100. [16]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 57. [17]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 106.